ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೪ ಜೂನ್ - ೨೦೧೪ ಸಂಚಿಕೆ - ೧೧

ತೀವ್ರತರ ಅಭಿವೃದ್ಧಿ ಮತ್ತು
ಕೋಮುವಾಸನೆಯ
ಕಾಲದಿ ಮತ್ತೆ ಹುಟ್ಟಿ
ಬಂದಿದ್ದಾರೆ ಗಾಂಧೀ

* * * *

ಬದಲಾವಣೆಯ
ಆರಂಭ ಸ್ವಂತ
ಪರಿವರ್ತನೆಯಿಂದ

ಜನಪದ ವಿಚಾರದಲ್ಲಿ

ಜೂನ್ - ೨೦೧೪

೧) ತೀವ್ರತರ ಅಭಿವೃದ್ಧಿ ಮತ್ತು ಕೋಮುವಾಸನೆಯ ಕಾಲದಿ ಮತ್ತೆ ಹುಟ್ಟಿ ಬಂದಿದ್ದಾರೆ ಗಾಂಧೀ - ಸುರೇಂದ್ರ ಕೌಲಗಿ

ಎಲ್ಲ ಕಾಲಕ್ಕೂ, ಎಲ್ಲ ಸಂದರ್ಭದಲ್ಲೂ, ಎಲ್ಲ ಪರಿಸ್ಥಿತಿಯಲ್ಲೂ, ಪ್ರಸ್ತುತವಾಗುವಾಗುವಂತಿರುವ ಗಾಂಧೀ ವಿಚಾರಗಳು ನೂತನ ಸರ್ಕಾರದ ಆಡಳಿತ ಸಂದರ್ಭದಲ್ಲಿ ಬಹಳ ಪ್ರಸ್ತುತವಾಗಿ ಮತ್ತು ವೈಚಾರಿಕವಾಗಿ ಗಾಂಧೀ ಪುನಃ ಜನ್ಮವೆತ್ತಿದ್ದಾರೆ ಎಂಬುದು ಈ ಲೇಖನದ ತಿರುಳು.

೨) ಬದಲಾವಣೆಯ ಆರಂಭ ಸ್ವಂತ ಪರಿವರ್ತನೆಯಿಂದ

-ಡಾ. ಅಭಯ್ ಬಂಗ್

ಇಂದಿನ ಸಮಾಜ ವ್ಯವಸ್ಥೆಯನ್ನು ಬದಲಾಯಿಸಬೇಕಾದರೆ ಮತ್ತು ಸುಧಾರಿಸಬೇಕಾದರೆ ಆ ಬದಲಾವಣೆ ನಮ್ಮಿಂದಲೇ ಪ್ರಾರಂಭವಾಗಬೇಕೆಂದು ಈ ಲೇಖಕರು ಹೇಳುತ್ತಾರೆ.

೩) ತಿಂಗಳ ಸುತ್ತಲಿನ ಮಹಾಮಹಿಮರು

- ಸುಂದರ್ ಕೆನಾಜ್

ಏಪ್ರಿಲ್ ಮತ್ತು ಮೇ ತಿಂಗಳು ಬೇರೆಲ್ಲ ತಿಂಗಳುಗಳಿಗಿಂತ ವಿಶೇಷ ಮಹತ್ವದ್ದು. ಏಕೆ ಹಾಗೆ ಎಂಬುದನ್ನು ಈ ಲೇಖನ ವಿವರಿಸುತ್ತದೆ.

೪) ಪ್ರಕೃತಿಯಲ್ಲಿನ ಸೊಬಗು! - ವಿನೋಬಾ

೫) ಖಾದಿ ವಿಚಾರ

೬) ಸರ್ವೋದಯ ಆಂದೋಲನದ ಮುನ್ನಡೆ

೭) ಜನಪದ ಸೇವಾ ಟ್ರಸ್ಟ್ ಸಮಾಚಾರ

೮) ಜನಪದ ನಿಲಯದ ಅಂತರಂಗದಲ್ಲಿ - ೧೨೩

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜೂನ್ - ೨೦೧೪
ಸಂಪುಟ - ೧೪
ಸಂಚಿಕೆ - ೧೧

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - ೫೭೧೪೩೧
ಮಂಡ್ಯ ಜಿಲ್ಲೆ

ಫೋನ್ : 08232 - 316344
08232 - 299854
email :
janapada@yahoo.com
Web: janapada.net

ದೆಹಲಿಯಲ್ಲಿ

ಹೊಸ್ತಿಲಾಚೆಗೆ ನಿಂತು ಹಿಂದೆ ಮುಂದೆ
ನೋಡುವಗತ್ಯ ಇಲ್ಲ.
ಇದು ಹೊಸ್ತಿಲೇ ಅಲ್ಲ;
ಒಳಗು ಹೊರಗುಗಳೆಂಬ
ವ್ಯತ್ಯಾಸವೇ ತುಂಡು.
ಹಾಗಾಗಿ ಇದು ಬರಿ ಹೊಸ್ತಿಲೇ
ಎಂದರೂ ಸರಿಯೆ.
ಭೂಗತಚರಂಡಿಕೊಳೆ ಮಸಲತ್ತುಗಳ ಮೇಲೆ
ಸಿಮೆಂಟು ದಾರಿಗಳ ಚಕ್ರವ್ಯೂಹದೊಳಹೊಕ್ಕು
ಹೊರಡಲಾರದೆ ಸದಾ ಹೊರಡುತ್ತಲೇ
ಇರುವ ನಿರಭಿಮನ್ಯುಗಳ ನಿಷ್ಫಲ ತೀಟೆಗಳ
ಹೊರಸು. ಹಾಸು, ಹಾಸು, ಬರಿ ಬೀಸು;
ಉಸಿರುಕಟ್ಟಿಸುವಂತೆ ಸಮತಟ್ಟುಗಳ ಸೀಳಿ
ಹೊರಬರುವ ಕಾಂಕ್ರೀಟು ಗೋರಿಗಳ
ತುಂಬ ಅಪಮೃತ್ಯು ಪಥಕಗಳ ಕೊನೆ
ಪಾನಗೋಷ್ಠಿ.

– ಗೋಪಾಲಕೃಷ್ಣ ಅಡಿಗ

ಚಿಂತನೆಗೊಂದು ಸಂಗತಿ

ಆಧುನಿಕ ಅಭಿವೃದ್ಧಿಯ ನೀತಿಯ ಕಾರಣದಿಂದಾಗಿ ರಸ್ತೆ ಬದಿಯ ಮರಗಳನ್ನು ಮತ್ತು ಕಾಡಿನಲ್ಲಿರುವ ಮರಗಳನ್ನು ನೆಲಸಮಮಾಡುವುದು ಸರ್ಕಾರದ ಅಧಿಕೃತ ನೀತಿಯೇ ಆಗಿರುವುದು ಕಂಡು ಬರುತ್ತಿದೆ. ಕೊಡಗಿನ ಅರಣ್ಯದ ಮೂಲಕ ತಮಿಳುನಾಡಿನ ಕೈಗಾರಿಕೆಯೊಂದಕ್ಕೆ ಪ್ರಬಲವಾದ ಶಕ್ತಿಯುಳ್ಳ ವಿದ್ಯುತ್‌ವಾಹಕವನ್ನು ಹಾಕುವ ಕೆಲಸದ ನಿಮಿತ್ತ ದೊಡ್ಡ ಪ್ರಮಾಣದಲ್ಲಿ ಮರಗಳನ್ನು ಕಡಿಯಲಾಗುತ್ತಿದೆ. ಆ ಯೋಜನೆಯನ್ನು ಪರಿಸರವಾದಿಗಳು ಮತ್ತು ಹಸಿರು ಸೇನೆಯವರು ವಿರೋಧಿಸುತ್ತಿದ್ದಾರೆ. ಒಂದು ಕಾಲಕ್ಕೆ ಉದ್ಯಾನಗಳ ನಗರ ಮತ್ತು ಅನೇಕ ಮರಗಳ ಕಾರಣದಿಂದಾಗಿ ಪ್ರಕೃತಿ ಸಹಜ ಹವಾನಿಯಂತ್ರಿತ ನಗರವೆಂದು ಪ್ರತೀತಿಪಡೆದಿದ್ದ ಬೆಂಗಳೂರು, ನಗರ ನಗರಾಭಿವೃದ್ಧಿ ಯೋಜನೆಗಳಿಂದಾಗಿ ಈಗ ಕಾಂಕ್ರೀಟ್ ಕಾಡಾಗಿದೆ. ತಾಪಮಾನ ಹೆಚ್ಚುತ್ತಿದೆ. ಅಭಿವೃದ್ಧಿ ಯೋಜನೆ ಕಾರ್ಯಗತಗೊಳಿಸುವ ಅಧಿಕಾರಿಗಳು ಪರಿಸರ ರಕ್ಷಣೆಯ ವಿಷಯವಾಗಿ ಕಿಂಚಿತ್ತೂ ಗಮನಿಸುವುದಿಲ್ಲ ಎಂಬುದು ಬಹಳ ಕಳವಳಕಾರಿಯಾದ ಸಂಗತಿ. ಪರಿಸರವಾದಿಗಳಿಂದ ಒತ್ತಡ ಬಂದಾಗ ಯೋಜನಾಧಿಕಾರಿಗಳು ತಮ್ಮ ಮೂಲ ಯೋಜನೆಯಲ್ಲಿ ಬದಲಾವಣೆ ತರುತ್ತಾರೆ. ವಿರೋಧ ಬಂದರೆ ಅಣೆಕಟ್ಟೆಯ ಎತ್ತರ ಕಡಿಮೆಯಾಗುತ್ತದೆ. ರಾಷ್ಟ್ರೀಯ ಹೆದ್ದಾರಿಗಳ ಮಾರ್ಗಗಳು ಬದಲಾಗುತ್ತವೆ. ಉದಾಹರಣೆಗೆ ಹುಮ್ನಾಬಾದ್ – ಗುಲ್ಬರ್ಗಾ– ಬಿಜಾಪುರದ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸುವಾಗ ೩೩,೬೭೬ ಮರಗಳನ್ನು ಕಡಿಯುವುದಾಗಿ ಹೇಳಿತ್ತು. ಇದಕ್ಕೆ ಪರಿಸರವಾದಿಗಳಿಂದ ವಿರೋಧ ಬಂದ ಮೇಲೆ ಹೆದ್ದಾರಿಯ ಮಾರ್ಗವನ್ನು ಪುನರ್‌ರೂಪಿತಗೊಳಿಸಿ ಈಗ ಕೇವಲ ೨,೨೧೦ ಮರಗಳನ್ನು ಕಡಿಯುವುದಾಗಿ ತಿಳಿಸಿದೆ. ತನ್ಮೂಲಕ ೩೩,೪೬೬ ಮರಗಳನ್ನು ಉಳಿಸುವುದಾಗಿ ಹೇಳಿದೆ. ಈ ರೀತಿ ಇದೆ ನಮ್ಮ ಯೋಜಕರ ಕಾರ್ಯವೈಖರಿ! ಅಭಿವೃದ್ಧಿಯ ಕೊಡಲಿಯ ಏಟಿನಿಂದ ಕೊಡಗಿನ ಅರಣ್ಯ ಉಳಿಸಬೇಕಿದೆ. ಗದಗ್ ಜಿಲ್ಲೆಯ ಕಪ್ಪತ್ತುಗುಡ್ಡವನ್ನು ಕೂಡ ಉಳಿಸಬೇಕಿದೆ. ಅಭಿವೃದ್ಧಿಯ ವ್ಯಾಖ್ಯೆಯೊಂದಿದ್ದರೆ ಅದರ ಬಗ್ಗೆ ಪುನರಾಲೋಚಿಸುವ ಕಾಲ ಬಂದಿದೆ ಎಂಬುದು ನಮ್ಮೆಲ್ಲರ ಚಿಂತನೆಯ ಸಂಗತಿಯಾಗಿದೆ.

ತೀವ್ರತರ ಅಭಿವೃದ್ಧಿ ಮತ್ತು ಕೋಮು ವಾಸನೆಯ ಕಾಲದಿ ಮತ್ತೆ ಹುಟ್ಟಿ ಬಂದಿದ್ದಾರೆ ಗಾಂಧೀ

– ಸುರೇಂದ್ರ ಕೌಲಗಿ

> ರಾಜಕೀಯ ಅಧಿಕಾರ ಗುರಿಯಲ್ಲ. ಜನರು ಜೀವನದ ಪ್ರತಿಯೊಂದು ವಿಭಾಗದಲ್ಲಿ ತಮ್ಮ ಪರಿಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳುವ ಸಾಧನ ಅದು."
>
> –(ಯಂಗ್ ಇಂಡಿಯಾ – ೦೨/೦೭/೧೯೩೧)

ಭಾರತ ದೇಶದ ಮಟ್ಟಿಗೆಯಂತೂ ದೇಶ ಐತಿಹಾಸಿಕವಾಗಿ ಹೊಸ ತಿರುವು ತೆಗೆದುಕೊಳ್ಳುತ್ತಿರುವಾಗಲೆಲ್ಲ ಗಾಂಧೀ ವೈಚಾರಿಕವಾಗಿ ಹುಟ್ಟಿ ಬಂದಿದ್ದಾರೆ. ದೇಶದ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಹದಿನಾರನೇ ಲೋಕಸಭಾ ಚುನಾವಣೆ ನಂತರ ಹಳೆಯ ನೀರು ಕೊಚ್ಚಿ ಹೋಗಿ ಹೊಸ ನೀರು ಬಂದಿರುವ ಈ ಕಾಲದಿ ಗಾಂಧೀ ಮತ್ತೆ ತನ್ನ ಸುಸ್ಥಿರ, ಸುನಿಶ್ಚಿತ ಮತ್ತು ಸರ್ವೋದಯದ ವಿಚಾರದೊಂದಿಗೆ ಹುಟ್ಟಿ ಬಂದಿದ್ದಾರೆ.

ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಬಿ.ಜೆ.ಪಿ ಪಾರುಪತ್ಯದ ಎನ್.ಡಿ.ಎ ಸರ್ಕಾರ ಅಧಿಕಾರಕ್ಕೆ ಬಂದಿದೆ. ನರೇಂದ್ರ ಮೋದಿ ಪ್ರಧಾನಮಂತ್ರಿಯಾಗಿದ್ದಾರೆ. ಪ್ರಧಾನಮಂತ್ರಿಯವರಿಗೂ, ಹೊಸ ಸರ್ಕಾರಕ್ಕೂ ಸ್ವಾಗತ. ಬಹುಮತದ ಆಳ್ವಿಕೆ ಪ್ರಾರಂಭವಾಗಿದೆ. ಈ ಸಂದರ್ಭದಲ್ಲಿ ಗೋಪಾಲಕೃಷ್ಣ ಗಾಂಧಿ ಹೇಳಿದ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ. ಬಿ.ಜೆ.ಪಿ ಗೆ ದೇಶದ ಒಟ್ಟು ಮತದಾರರಲ್ಲಿ ಶೇಕಡ ೩೧ರಷ್ಟು ಜನರು ಮತಚಲಾಯಿಸಿರಬಹುದು. ಇನ್ನು ಶೇಕಡ ೬೯ ರಷ್ಟು ಜನ ಬಿ.ಜೆ.ಪಿ ಗೆ ತಮ್ಮ ಮತ ಹಾಕಿರುವುದಿಲ್ಲ. ಮೋದಿಯವರ ಕಲ್ಪನೆಯ 'ಭಾರತ'ವನ್ನು ಅವರು ಒಪ್ಪಿಲ್ಲ. ದೇಶದ ಭದ್ರತೆ, ಸುರಕ್ಷಿತತೆ ಮತ್ತು ಪ್ರಗತಿ, ದೇಶವಾಸಿಗಳೆಲ್ಲರು ದೇಶ ನಿರ್ಮಾಣದಲ್ಲಿ ತೊಡಗಿದಾಗ ಮಾತ್ರ ಸಾಧ್ಯವಾಗುತ್ತದೆ. ಒಗ್ಗಟ್ಟಿಲ್ಲದ ದೇಶದಲ್ಲಿ ಸೈನ್ಯ ಎಷ್ಟೇ ಬಲಶಾಲಿಯಾಗಿದ್ದರೂ ಸೇನೆಯ ಬಳಿ ಆಧುನಿಕ ಶಸ್ತ್ರಾಸ್ತ್ರಗಳಿದ್ದರೂ ದೇಶ ನಿಜ ಅರ್ಥದಲ್ಲಿ ಮುನ್ನಡೆಯಲಾರದು. ದೇಶದ ಸಮಾಜದಲ್ಲಿ ಸೌಹಾರ್ದತೆ,

ಸಹಕಾರ ಮತ್ತು ಪ್ರೇಮ ಇರಬೇಕಾದುದು ಅಗತ್ಯ. ಎಲ್ಲ ವಿಧವಾದ ಅಸಮಾನತೆಯನ್ನು ಹೋಗಲಾಡಿಸಲು ಇವು ಅವಶ್ಯಕ. ಗತಿಸಿದ ಚುನಾವಣೆಯ ಕಾಲದಲ್ಲಿ ಕೋಮು ಆಧಾರಿತ ಮತ್ತು ಜಾತಿ ಆಧಾರಿತ ಮಾತುಗಳು ಕೇಳಿ ಬಂದವು. ಮತ ಪಡೆಯಲು ಹಣದ ದುರ್ಬಳಕೆಯಂತೂ ಯಥೇಚ್ಛವಾಗಿ ಆಯಿತು. ಮೂವತ್ತು ಕೋಟಿಗೂ ಮಿಕ್ಕಿ ಕಪ್ಪು ಹಣ ಹರಿದಾಡಿತು. ಹೊಸ ಸರ್ಕಾರ ಕೋಮುವಾದದ ವಿಚಾರ, ಜಾತಿವಾದದ ವಿಚಾರ ಇತ್ಯಾದಿಗಳು ಮರೆಮಾಚುವಂತೆ ಹಾಗೂ ಕಪ್ಪು ಹಣ ನ್ಯಾಯಯುತ ಚಲಾವಣೆಗೆ ಬರುವಂತೆ ಮಾಡ ಬೇಕಾದುದು ಹೊಸ ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಎಡ ಪಂಕ್ತೀಯ ವಿಚಾರದ ಪಕ್ಷಗಳ ಅಸ್ತಿತ್ವವೆ ಇಲ್ಲವಾಗಿದೆ. ಆದ್ದರಿಂದ ಕಾರ್ಮಿಕರ, ಶ್ರಮಜೀವಿಗಳ ಮತ್ತು ಶೋಷಿತರ ಹಾಗೂ ದಲಿತರ ಪರವಾಗಿ ಎತ್ತುವ ಧ್ವನಿಗಳು ಇಲ್ಲವಂಥವಾಗಿವೆ. ಇವರೆಲ್ಲರ ಹಿತವನ್ನು ಸಾಧಿಸಬೇಕಾದಂಥ ಜವಾಬ್ದಾರಿ ಬಹುಮತ ಗಳಿಸಿರುವ ಮೋದಿ ಸರ್ಕಾರದ ಮೇಲಿದೆ. ಅದರಲ್ಲಿಯೂ ಮುಖ್ಯವಾಗಿ ಮಾನಸಿಕವಾಗಿ ಆತಂಕಕ್ಕೆ ಒಳಗಾಗಿರುವ ಅಲ್ಪಸಂಖ್ಯಾತರ ಆತಂಕವನ್ನು ನಿವಾರಿಸುವ ಬಹು ದೊಡ್ಡ ಜವಾಬ್ದಾರಿ ಹೊಸ ಸರ್ಕಾರದ ಮೇಲಿದೆ. " ಎರಡು ಜನಾಂಗಗಳನ್ನು ನನ್ನ ರಕ್ತದ ಬಲದಿಂದ ಜೋಡಿಸಬೇಕೆಂಬುದು ನನ್ನ ಬಯಕೆಯಾಗಿದೆ. ಅದಾಗುವ ತನಕ ಹಿಂದುಗಳಷ್ಟೇ ಮುಸಲ್ಮಾನರನ್ನೂ ಪ್ರೀತಿಸುತ್ತೇನೆ ಎಂದು ಸಿದ್ಧ ಮಾಡಬೇಕಿದೆ." ಎಂದು ಹೇಳಿದ ಗಾಂಧೀ ಈಗ ಹುಟ್ಟಿ ಬಂದಂತೆ ಅನಿಸುವುದಿಲ್ಲವೆ? ಸ್ವಾತಂತ್ರ್ಯಪೂರ್ವದಲ್ಲಿ ಮತ್ತು ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ, ೧೯೪೬ಮತ್ತು೪೮ರ ಅವಧಿಯಲ್ಲಿ ಗಾಂಧೀ ಕೋಮುಸೌಹಾರ್ದತೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರು. ಅವರು ಸೂಚಿಸಿದ್ದ ಹದಿನೆಂಟು ಪ್ರಕಾರದ ರಚನಾತ್ಮಕ ಕಾರ್ಯಗಳಲ್ಲಿ ಬಹು ಮುಖ್ಯವಾದುದು ಕೋಮು ಸೌಹಾರ್ದತೆಯ ಕಾರ್ಯ, ಮದ್ಯಪಾನ ನಿಷೇಧದ ಕಾರ್ಯ, ಗೋಸಂವರ್ದನೆಯ ಕಾರ್ಯ ಮುಖ್ಯವಾಗಿದ್ದವು. ಗಾಂಧೀ ಸೂಚಿಸಿದ್ದ ಈ ರಚನಾತ್ಮಕ ಕಾರ್ಯಗಳು ಇಂದಿನ ಪರಿಸ್ಥಿತಿಯಲ್ಲಿ ಅತ್ಯಧಿಕ ಪ್ರಸ್ತುತವಾಗಿವೆ ಮತ್ತು ನೂತನ ಸರ್ಕಾರ ತನ್ನ ಮೂಲ ರಾಜಕೀಯ ನೀತಿಗಳಲ್ಲಿ ಇವುಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಇನ್ನೊಂದು ಬಹು ಮುಖ್ಯ ಕಾರ್ಯಕ್ರಮ ಗಾಂಧೀಜಿ ಸೂಚಿಸಿದ್ದು ಶಿಕ್ಷಣ ಕ್ಷೇತ್ರದ್ದು. ದಿಲ್ಲಿಯ ಕೆಂಪು ಕೋಟೆಯ ಮೇಲೆ ಹಾರುತ್ತಿದ್ದ ಯೂನಿಯನ್ ಜಾಕ್ ಧ್ವಜವನ್ನು ಕೆಳಗಿಳಿಸಿ ಭಾರತದ ಅಶೋಕ ಚಕ್ರವುಳ್ಳ ತ್ರಿವರ್ಣ ಧ್ವಜವನ್ನು ಮೇಲೇರಿಸಿದಾಗಲೇ ಇಂಗ್ಲೀಷ್ ಮಾದರಿ ಶಿಕ್ಷಣದ ಬದಲಾಗಿ ಭಾರತ ಮಾದರಿ ಜೀವನ ಶಿಕ್ಷಣವನ್ನು ತರಬೇಕೆಂಬ ಉದ್ದೇಶ್ಯ ಅವರದ್ದಾಗಿತ್ತು. ಆದರೆ ಇದುವರೆಗೆ ಜಾರಿಯಲ್ಲಿರುವ ಶಿಕ್ಷಣ ಪದ್ಧತಿ ಯಾವ ಅರ್ಥದಲ್ಲಿಯೂ ನಿಜವಾದ ಶಿಕ್ಷಣವಾಗಿಲ್ಲ. ತೀವ್ರತರ ಅಭಿವೃದ್ಧಿಯ ಗುಂಗಿನಲ್ಲಿರುವ ಹೊಸ ಸರ್ಕಾರವು

ಕೂಡ ಅಭಿವೃದ್ಧಿ ಮುಖೀ ಶಿಕ್ಷಣ ಪದ್ಧತಿಯನ್ನೇ ಉಳಿಸಿಕೊಂಡು ಬರುವ ಸಾಧ್ಯತೆ ಕಾಣುತ್ತದೆ. ಹೊಸ ಸರ್ಕಾರ ಹೇಳುತ್ತಿರುವಂತೆ ಹೊಸ ದೇಶದ ನಿರ್ಮಾಣಕ್ಕಾಗಿ ಜೀವನ್ಮುಖಿ ಶಿಕ್ಷಣವನ್ನು ಜಾರಿಗೆ ತರಬೇಕೆಂಬುದು ಗಾಂಧೀ ವಿಚಾರಗಳಲ್ಲಿ ಸಂಕೇತಿತವಾಗಿದೆ.

ಅಭಿವೃದ್ಧಿಯ ಮಂತ್ರವನ್ನೇ ಜಪಿಸುತ್ತ ಅಧಿಕಾರಕ್ಕೆ ಬಂದಿರುವ ನೂತನ ಸರ್ಕಾರ ಮೋದಿಯವರ ನೇತೃತ್ವದಲ್ಲಿ ಗುಜರಾತ್ ಮಾದರಿ ಅಭಿವೃದ್ಧಿಯನ್ನು ತೀವ್ರಗೊಳಿಸುವ ಸಾಧ್ಯತೆಯಿದೆ. ಇಂಥ ಅಭಿವೃದ್ಧಿ ಮಾದರಿಯಲ್ಲಿ ದೇಶದ ಬೆನ್ನೆಲುಬಾದ ಗ್ರಾಮಗಳು ನಶಿಸಿ ಹೋಗುವ ಭೀತಿಯಿದೆ. ಸುಸ್ಥಿರ ಮತ್ತು ಪರಿಸರಪ್ರೇಮಿ ಮತ್ತು ಗ್ರಾಮ ಹಾಗೂ ನಗರಗಳೆಲ್ಲದರ ಅಭಿವೃದ್ಧಿಯನ್ನು ಸಾಧಿಸುವ ಹೊಸ ಅಭಿವೃದ್ಧಿ ನೀತಿಯನ್ನು ಜಾರಿಗೆ ತರಬೇಕಾದುದು ಅಗತ್ಯ. ದೇಶದ ಇದುವರೆಗಿನ ಆರ್ಥಿಕ ನೀತಿಯಿಂದ ಭಾರತ ಇನ್ನೊಂದು ಅಮೇರಿಕಾವಾಗಿ ರೂಪಾಂತರ ಗೊಳ್ಳುತ್ತಿರುವಂತೆಯೂ ಭಾರತ ತನ್ನ ಅಸ್ಮಿತೆಯನ್ನು ಕಳೆದು ಕೊಳ್ಳುತ್ತಿರುವಂತೆಯೂ ಆಗುತ್ತಿರುವ ಸ್ಥಿತಿಯಲ್ಲಿ ಗಾಂಧೀ ತಮ್ಮ ವಿಶಿಷ್ಟ ಆರ್ಥಿಕ ನೀತಿಯ ಅಗತ್ಯತೆಯ ಕಾರಣದಿಂದಾಗಿ ಹುಟ್ಟಿ ಬಂದಂತೆ ಅನಿಸುತ್ತಿದೆ. ಕಾರ್ಪರೇಟ್‌ಗಳ ಹಿತವನ್ನೇ ಬಯಸುವಂತೆ ಮತ್ತು ಅವರ ಹಿತಕ್ಕನುಗುಣವಾಗಿ ಅಭಿವೃದ್ಧಿ ಯೋಜನೆಗಳು ರೂಪುಗೊಳ್ಳುವಂಥ ಸಾಧ್ಯತೆಗಳು ಉಂಟಾಗಿರುವ ನೂತನ ಸರ್ಕಾರದ ಕಾಲದಲ್ಲಿ ದೇಶದಲ್ಲಿರುವ ಗ್ರಾಮೋದ್ಯೋಗಗಳನ್ನು, ಖಾದಿ ಉದ್ಯಮವನ್ನು, ಗೃಹ ಕೈಗಾರಿಕೆಗಳನ್ನು ಕೂಡ ಅಭಿವೃದ್ಧಿ ಪಡಿಸುವತ್ತ ಸರ್ಕಾರ ಗಮನ ಹರಿಸಬೇಕೆಂಬುದು ಗಾಂಧೀಯವರ ಧ್ವನಿಯಾಗಿದೆ. ಎಲ್ಲರನ್ನೂ ಎಲ್ಲವನ್ನೂ ಒಳಗೊಂಡ ಅಭಿವೃದ್ಧಿಯ ಮಂತ್ರವಾಗಬೇಕೆ ಹೊರತು ಖಂಡಿಖಂಡಿತವಾದ ರೀತಿಯಲ್ಲಲ್ಲ. ಸರ್ಕಾರದ ಪಾತ್ರ ಕಡಿಮೆಯಿದ್ದು ಜನತೆಯ ಪಾತ್ರ ಹಿರಿದಾಗಿರುವ ಆಡಳಿತವನ್ನು ಜಾರಿಗೆ ಬರಬೇಕೆಂಬುದು ಗಾಂಧೀಯವರ ನಿರ್ದೇಶನವಾಗಿತ್ತು. ೧೯೨೧ನೇ ಇಸವಿಯಲ್ಲೇ "ಗಾಂಧೀ ಒಳ್ಳೆಯ ಸರ್ಕಾರ ಸ್ವರಾಜ್ಯಕ್ಕೆ ಪರ್ಯಾಯವಲ್ಲವೆಂಬ" ಮಾತನ್ನು ಹೇಳಿದ್ದರು. ಆ ಮಾತು ಹೊಸ ಸರ್ಕಾರಕ್ಕೂ ಅನ್ವಯಿಸುತ್ತದೆ. ಈ ಮಾತಿನ ಮೂಲಕ ಗಾಂಧಿ ಮತ್ತೆ ಹುಟ್ಟಿ ಬಂದಿದ್ದಾರೆ.

ಪ್ರಾರಂಭ ಸ್ವಂತ ಪರಿವರ್ತನೆಯಿಂದಲೆ

– ಡಾ//ಅಭಯ್ ಬಂಗ್

೧ ಮಾರ್ಚ್ ೨೦೧೪ ರಂದು ಗಾಂಧೀಜಿಯವರ ಸೇವಾ ಗ್ರಾಮ ಆಶ್ರಮದಲ್ಲಿ ಅಖಿಲ ಭಾರತ ಸರ್ವೋದಯ ಮಂಡಲದ ಅಧಿವೇಶನದಲ್ಲಿ ಮುಖ್ಯ ಅತಿಥಿಯಾಗಿ ಮಾಡಿದ ಭಾಷಣ. ಅಭಯ್ ಬಂಗ್ ಚಿಕ್ಕ ವಯಸ್ಸಿನಲ್ಲಿಯೇ ತಮ್ಮ ತಂದೆ ಠಾಕೂರ್‌ದಾಸ್ ಬಂಗ್‌ರ ಕಾರಣದಿಂದಾಗಿ ಸರ್ವೋದಯ ಆಂದೋಲನದ ಜೊತೆ ಇದ್ದವರು. ಈಗ ತಮ್ಮ ಯೌವನದಲ್ಲಿಯೂ ಆಂದೋಲನದ ಜೊತೆಗೆ ನಿಕಟ ಸಂಪರ್ಕವಿರಿಸಿಕೊಂಡಿದ್ದಾರೆ.

ಇದನ್ನು ಉದ್ಘಾಟನೆಯ ಭಾಷಣದ ಬದಲಾಗಿ ನಾನು ಹೋಮ್‌ಕಮಿಂಗ್ ಎಂದು ಹೇಳಬಯಸುತ್ತೇನೆ. ಇದು ಮನೆಗೆ ಹಿಂದಿರುಗಿ ಬಂದಂತೆಯೇ ಇದೆ. ಮನೆಗೆ ಈ ಹಿಂದಿರುಗುವಿಕೆ ಸರ್ವಸೇವಾ ಸಂಘಕ್ಕೂ ಆಗಿದೆ ಮತ್ತು ನನಗೂ ಆಗಿದೆ. ನನಗೆ ನೆನಪಿರುವಂತೆ ನಾವು ಕುಳಿತುಕೊಂಡಿರುವ ಇದೇ ಶಾಂತಿ ಭವನದಲ್ಲಿ, ಇದೇ ಮಾರ್ಚ್ ತಿಂಗಳಲ್ಲಿ ೬೬ ವರ್ಷ ಹಿಂದೆ ಗಾಂಧೀಜಿ ನಿರ್ಗಮಿಸಿದ ನಂತರ ಮಹಾಸಭೆ ಆಗಿತ್ತು. ಅದು ಗಾಂಧೀವಾದಿ ಕಾರ್ಯಕರ್ತರ ಸಭೆ. ಇಲ್ಲಿಯೇ ಜವಹರಲಾಲ್ ಕುಳಿತಿದ್ದರು, ರಾಜೇಂದ್ರ ಬಾಬು ಕುಳಿತಿದ್ದರು, ದಾದಾ ಕೃಪಲಾನಿ ಇದ್ದರು, ದಾದಾ ಧರ್ಮಾಧಿಕಾರಿ ಇದ್ದರು ಮತ್ತು ಇದೇ ಹಾಲ್‌ನಲ್ಲಿ ಕುಳಿತು ವಿನೋಬಾ ಸರ್ವೋದಯ ಸಮಾಜ ಮತ್ತು ಸರ್ವಸೇವಾ ಸಂಘದ ಕಲ್ಪನೆ ಇಟ್ಟಿದ್ದರು. ಇದೇ ಹಾಲಿನಲ್ಲಿ ಆ ಸಭೆಯಲ್ಲಿ ಸರ್ವ ಸೇವಾ ಸಂಘದಂತಹ ಒಂದು ಸಂಘಟನೆಯನ್ನು ಮಾಡಬೇಕೆಂಬ ನಿರ್ಣಯವಾಯಿತು. ಇದೇ ಹಾಲ್‌ನಲ್ಲಿ ೬೬ ವರ್ಷಗಳ ಹಿಂದೆ ಸರ್ವಸೇವಾ ಸಂಘದ ಸ್ಥಾಪನೆ ಆಯಿತು. ನನ್ನ ಸ್ವಂತ ಬಾಲ್ಯ ಕೂಡ ಸೇವಾಗ್ರಾಮ ಆಶ್ರಮದಲ್ಲಿ ಕಳೆಯಿತು. ಹಾಗೆಯೇ ಸರ್ವಸೇವಾ ಸಂಘದ್ದೂ ಕೂಡ. ನಮ್ಮಿಬ್ಬರಿಗೂ ಕೂಡ ಇದು ಮನೆಗೆ ಹಿಂದಿರುಗುವಿಕೆ ಆಗಿದೆ.

೬೬ ವರ್ಷಗಳ ನಂತರ ನಾವೆಲ್ಲರೂ ಸೇವಾ ಗ್ರಾಮಕ್ಕೆ ಹಿಂದಿರುಗಿದರ ಅರ್ಥ ಗಾಂಧಿಯ ಬಳಿ ಹಿಂದಿರುಗಿದ್ದೇವೆ. ಆದ್ದರಿಂದ ಇಂದು ಜಗತ್ತಿನ ಸ್ಥಿತಿ ಏನಿದೆ ಮತ್ತು ನಮ್ಮ ಸ್ಥಿತಿ ಏನಿದೆ, ಈ ಎರಡೂ ವಿಷಯಗಳ ಬಗ್ಗೆ ಸ್ವಲ್ಪ ಸಿಂಹಾವಲೋಕನ ಮಾಡೋಣ, ನಂತರ ನಾನು ನನಗೆ ಕಂಡಿದ್ದನ್ನು ಮತ್ತು ಹೊಳೆದದ್ದನ್ನು ನಿಮ್ಮ ಮುಂದೆ ಇಡುವ ಪ್ರಯತ್ನ ಮಾಡುವೆ.

ಇಂದು ಜಗತ್ತಿನ ಸ್ಥಿತಿ ಹೇಗಿದೆ ಮತ್ತು ಅಲ್ಲಿ ಗಾಂಧಿ ಎಲ್ಲಿದ್ದಾರೆ? ಜಗತ್ತಿನ ಎದುರಿಗೆ ಎಲ್ಲಕ್ಕಿಂಥ ಮೂರು ದೊಡ್ಡ ಸಮಸ್ಯೆಗಳಿವೆ. ಅವುಗಳನ್ನು ನಾವು ಜಾಗತಿಕ ಸಮಸ್ಯೆಗಳೆಂದು ಕರೆಯೋಣ. ಅವುಗಳ ಕಾರಣದಿಂದಾಗಿ ನಾವು ಇಲ್ಲಿ ಸೇರಿದ್ದೇವೆ. ಮೊದಲನೆಯದು ಬಂಡವಾಳಶಾಹಿವಾದದ ಪಾಪ, ಎರಡನೆಯದು ಪೃಥ್ವಿಯ ತಾಪ ಮತ್ತು ಮೂರನೆಯದು ಹಿಂಸೆಯ ಶಾಪ. ಮೂರೂ ಸಮಸ್ಯೆಗಳು ಜಾಗತಿಕವಾಗಿವೆ ಮತ್ತು ಸ್ಥಾನೀಯ ಕೂಡ ಆಗಿವೆ.ಬಂಡವಾಳವಾದ ಜಗತ್ತಿನಲ್ಲಿ ಸಮೃದ್ಧಿ ತರುವುದೆಂದು ತಿಳಿಯಲಾಗಿತ್ತು ಆದರೆ ಬಂಡವಾಳವಾದ ಎಲ್ಲ ಸ್ಥಳದಲ್ಲಿಯೂ ಫ್ಲೇಲ್ ಆಗಲು ಪ್ರಾರಂಭಿಸಿತು. ಜಗತ್ತಿನಾದ್ಯಂತ ಇರುವ ಆರ್ಥಿಕ ವ್ಯವಸ್ಥೆಯು ರಿಸೆಷನ್‌ನಲ್ಲಿದೆ, ಬಂಡವಾಳವಾದ ಸಮೃದ್ಧಿಯನ್ನೇನೋ ತಂದಿತಾದರೂ ಬಹು ದೊಡ್ಡ ಪ್ರಮಾಣದಲ್ಲಿ ವಿಷಮತೆಯನ್ನೂ ತಂದಿತು. ಬಡತನ ಕೂಡ ಉಳಿಯಿತು. ಅದು ಅಳಿಯಲಿಲ್ಲ. ಬಡ ದೇಶ ಮತ್ತು ಶ್ರೀಮಂತ ದೇಶಗಳೂ ಕೂಡ ಇರಲಿ ಆದರೆ ಎಲ್ಲಕ್ಕಿಂತ ಹೆಚ್ಚಾಗಿ ಅದು ಲೋಭವನ್ನು ಬೆಳೆಸಿತು. ಗ್ರೀಡ್ "ಈಸ್ ಗುಡ್" ಎಂಬ ಬಂಡವಾಳವಾದದ ಮಂತ್ರ ಪ್ರತಿಯೊಂದು ಸ್ಥಳದಲ್ಲೂ ಪ್ರತಿಧ್ವನಿಗೊಳ್ಳತೊಡಗಿತು. ಈ ಲೋಭವನ್ನು ಅನಿಯಂತ್ರಿತವಾಗಿ ಬಿಟ್ಟಲ್ಲಿ ಏನಾಗುವುದು? ಇದನ್ನು ಬಂಡವಾಳವಾದದ ರಿಸೆಷನ್‌ದ ರೂಪದಲ್ಲಿ ನೋಡಿದ್ದೇವೆ.

ಚಾರ್ಲ್ಸ್ ಹ್ಯಾಂಡಿ ಮ್ಯಾನೇಜ್‌ಮೆಂಟ್ ಪ್ರಪಂಚದ ಜಾಗತಿಕ ಗುರುವಾಗಿದ್ದರು. ಅವರು ಬಂಡವಾಳವಾದ ಮತ್ತು ಮಾರ್ಕ್ಸ್‌ವಾದದ ಬಗ್ಗೆ ಗಮನೀಯ ವಿಶ್ಲೇಷಣೆ ಮಾಡಿದ್ದಾರೆ. ಅವರ ಪ್ರಕಾರ ಮಾರ್ಕ್ಸ್‌ವಾದ ಫ್ಲೇಲಾಗುವುದಕ್ಕೆ ಕಾರಣ ಅದರ ಬಳಿ ಬಹು ಸುಂದರ, ಬಹು ಆಕರ್ಷಕ ಸಮಾಜ ವ್ಯವಸ್ಥೆಯ ಕಲ್ಪನೆ ಇದ್ದಿತಾದರೂ ಆ ಕಲ್ಪನೆಯವರೆಗೆ ತಲುಪುವ ಮಾರ್ಗ ಅದಕ್ಕೆ ದೊರೆಯಲಿಲ್ಲ. ಉತ್ಪಾದನಾ ವ್ಯವಸ್ಥೆ, ಅರ್ಥ ವ್ಯವಸ್ಥೆ ಮತ್ತು ರಾಜ್ಯ ವ್ಯವಸ್ಥೆಯ ರೀತಿಯನ್ನು ಅದು ಹುಡುಕಲಾರದೆ ಹೋಯಿತು. ಆದ್ದರಿಂದ ಮಾರ್ಕ್ಸ್‌ವಾದ ಫ್ಲೇಲಾಯಿತು. ಬಂಡವಾಳವಾದದ ಬಳಿ ರೀತಿ ನೀತಿಗಳೇನೊ ಬಹು ಸುಂದರವಾಗಿವೆಯಾದರೂ ಆ ವಾದಕ್ಕೆ ಯಾವುದೇ ಕನಸು ಇಲ್ಲ. ಕೇವಲ ರೀತಿ ನೀತಿಗಳಿವೆ, ಉತ್ಪಾದನೆಯ ರೀತಿ ನೀತಿಗಳಿವೆ, ಪ್ರಾಫ್ಲಿಟ್ ಪಡೆಯುವ ರೀತಿಗಳಿವೆ ಆದರೆ ಅದು ಆತ್ಮವನ್ನು ಹುಡುಕಬೇಕಾಗುತ್ತದೆ. ಬಂಡವಾಳವಾದದ ಮಾಹಾನ್ ನಂಬರ್ ಒನ್ ಗುರುವಾದ ಮೈಕೆಲ್ ಪೋರ್ಟ್‌ರ್ ಕಳೆದ ವರ್ಷ ಒಂದು ಲೇಖನ ಬರೆದರು. ಅದರ ಶೀರ್ಷಿಕೆ 'ರಿ ಡಿಸ್ಕವರಿಂಗ್ ಕ್ಯಾಪಿಟಲಿಸಂ ಆಂಡ್ ರಿ ಸ್ಟ್ರಕ್ಚರಿಂಗ್' ಬಂಡವಾಳಕ್ಕೆ ಆತ್ಮ ಇಲ್ಲದಿರುವುದರಿಂದ ಅದಕ್ಕೆ ಸಾಮಾಜಿಕ ಉಪಯುಕ್ತತೆಯ, ಸಾಮಾಜಿಕ ಅನುಬಂಧದ ಹೊಸ ಆತ್ಮವನ್ನು ಹುಡುಕಬೇಕಾಗುವುದು. ಬಂಡವಾಳವಾದ ತನ್ನಷ್ಟಕ್ಕೆ ತಾನೇ ಗೊಂದಲದಲ್ಲಿದೆ. ಇದೆಲ್ಲವೂ ಏತಕ್ಕಾಗಿ? ಲಾಭಮಾಡಿಕೊಳ್ಳುವುದು ಇದೆ. ಆದರೆ ಅದು ಏತಕ್ಕಾಗಿ? ಬಂಡವಾಳವಾದದ ಒಳಗೇ ಇರುವ ಅದರ ನ್ಯೂನ್ಯತೆಯಿಂದಾಗಿ ಅದು ಇಂದು

ಕಷ್ಟದಲ್ಲಿದೆ. ನಾನು ಈ ಮೊದಲು ಹೇಳಿದಂತೆ ಜಗತ್ತಿನ ಮುಂದಿರುವ ಮೊದಲನೆಯ ಸಮಸ್ಯೆ ಬಂಡವಾಳವಾದದ ಪಾಪ.

ಎರಡನೆಯ ಸಮಸ್ಯೆ ಪೃಥ್ವಿಗೆ ಜ್ವರ ಬರುತ್ತಿದೆ. ಗ್ಲೋಬಲ್ ವಾರ್ಮಿಂಗ್ ಆಗುತ್ತಿದೆ. ಎಲ್ಲರ ಉಪಭೋಗ ಮಿತಿ ಮೀರಿ ಬೆಳೆದಿದೆ. ವಿಶೇಷವಾಗಿ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಮಿತಿಮೀರಿದ ರೀತಿಯಲ್ಲಿ ಉಪಭೋಗ ಮಾಡಿದಾಗ ನಾವು ಪರಿಸರದ ಮೇಲೆ ಬಹಳ ಅನ್ಯಾಯ ಮಾಡುತ್ತೇವೆ. ಪೃಥ್ವಿಗೆ ಜ್ವರ ಬರಲು ಪ್ರಾರಂಭವಾಗುತ್ತದೆ.

ಮೂರನೆಯದು ಹಿಂಸೆಯ ಶಾಪ. ಅಫ್‌ಘಾನಿಸ್ತಾನವಾಗಿರಲಿ, ನ್ಯೂಯಾರ್ಕ್‌ವಾಗಿರಲಿ, ತಾಲಿಬಾನ್‌ವಾಗಿರಲಿ, ಪಾಕಿಸ್ತಾನವಾಗಿರಲಿ, ಭಾರತವಾಗಿರಲಿ, ಗುಜರಾತ್‌ನಲ್ಲಿ ಗೋಧ್ರಾ ಆಗಿರಲಿ ಅಥವಾ ಅಯೋಧ್ಯೆಯಾಗಿರಲಿ ಅಥವಾ ಅದು ಮುಜಫ್ಫರ್‌ನಗರವಾಗಿರಲಿ ಜಗತ್ತಿನಲ್ಲಿ ಎಲ್ಲೆಡೆ ಹಿಂಸೆಯ ಶಾಪವಿದೆ. ಅಮೇರಿಕಾದ ಶಾಲೆಗಳಲ್ಲಿ ಹುಡುಗರು ಮೆಟಲ್ ಡಿಟೆಕ್ಟರ್ ಮೂಲಕ ಹೋಗಬೇಕಾಗುತ್ತದೆ. ಶಾಲೆಯೊಳಗೆ ಯಾರಾದರೂ ಪಿಸ್ತೂಲ್ ತೆಗೆದುಕೊಂಡು ಹೋಗಿರಬಹುದು ಮತ್ತು ೨೦ ಬಾಲಕರನ್ನು ಕೊಲೆಮಾಡಬಹುದು ಎಂಬುದು ಯಾರಿಗೆ ಗೊತ್ತು. ಜಗತ್ತಿನ ಎದುರಿಗೆ ಹಿಂಸೆ ವಿಕರಾಳ ರೂಪದಿಂದ ನಿಂತಿದೆ, ಇದಕ್ಕೆ ಗಾಂಧಿಯ ಉತ್ತರವೇನು?

ಕೆಲ ವರ್ಷಗಳ ಹಿಂದೆ ಲಂಡನ್‌ನಲ್ಲಿ ನಡೆದ ಒಂದು ಸಮ್ಮೇಳನಕ್ಕೆ ಹೋಗಿದ್ದೆ. ಸಮ್ಮೇಳನ ಪ್ರಮುಖರ ಸಭೆಯಾಗಿತ್ತು. ಪ್ರಾರಂಭದಲ್ಲಿ ನಮ್ಮನ್ನೆಲ್ಲ ಬಕಿಂಗ್‌ಹ್ಯಾಮ್ ಅರಮನೆಗೆ ಕರೆದುಕೊಂಡು ಹೋದರು. ಬ್ರಿಟೀಷ್ ಸಾಮ್ರಾಜ್ಯದ ಸಿಂಹ ಪೀಠವಾಗಿರುವ ಪಾರ್ಲಿಮೆಂಟ್ ಮತ್ತು ಅರಮನೆ ನೋಡಿಕೊಂಡು ಹೊರಗೆ ಬಂದಾಗ ಹೌಸ್ ಆಫ್ ಲಾರ್ಡ್ಸ್‌ದ ಎದುರಿನಲ್ಲಿ ಒಂದು ಚೌಕವಿದೆ. ಅಲ್ಲಿ ಕೆಲವು ಜನರು ಕೈಯಲ್ಲಿ ಘೋಷಣಾ ಫಲಕಗಳನ್ನು ಹಿಡಿದುಕೊಂಡು ನಿಂತಿದ್ದರು. ಅವರಲ್ಲಿ ಹೆಚ್ಚು ಆತ್ಮೀಯತೆ ಉಂಟಾಯಿತು. ಆದ್ದರಿಂದ ಅವರ ಭೇಟಿಗಾಗಿ ಹೋದೆ. ಅಲ್ಲಿ ಮೂರು ಪ್ರಕಾರದ ಜನರಿದ್ದರು. ಸರ್ಕಾರದ ನೀತಿಗಳಿಂದಾಗಿ ತೊಂದರೆಗೊಳಗಾಗಿದ್ದ ಬಡವರು ಮತ್ತು ಕೂಲಿಕಾರರ ಗುಂಪು ಒಂದಾಗಿತ್ತು. ಪ್ರೋಟೋಕಾಲ್ ಮೇಲೆ ಬ್ರಿಟನ್ ಹಸ್ತಾಕ್ಷರ ಮಾಡಲಿ ಮತ್ತು ಪರಿಸರ ಉಳಿಸಲಿ ಎಂಬುದಕ್ಕಾಗಿ ಅವರು ಅಲ್ಲಿ ನಿಂತಿದ್ದರು. ಮೂರನೆಯ ಗುಂಪು ಯುದ್ಧದಿಂದ ಬ್ರಿಟನ್ ತನ್ನ ಸೇನೆಯನ್ನು ಹಿಂತೆಗೆದುಕೊಂಡು ಬರಬೇಕೆಂದು ಒತ್ತಾಯಿಸಲು ನಿಂತಿತ್ತು. ಅಂದರೆ ಬಂಡವಾಳವಾದದ ಪಾಪ, ಪೃಥ್ವಿಯ ತಾಪ ಮತ್ತು ಹಿಂಸೆಯ ಶಾಪ ಈ ಮೂರರ ವಿಷಯದ ಬಗ್ಗೆ ಅಲ್ಲಿ ಜನರು ಮಾತನಾಡುತ್ತಿದ್ದರು. ಈ ಮೂರೂ ಗುಂಪುಗಳ ಹಿಂದೆ ಒಂದು ದೊಡ್ಡ ಬ್ಯಾನರ್ ಕಟ್ಟಲಾಗಿತ್ತು. ಅದರ ಮೇಲೆ ನಿಮ್ಮ ಜಗತ್ತು ಬದಲಾಯಿಸಬೇಕಾದರೆ ನಾವು ಬದಲಾಗಬೇಕು ಎಂದು ಬರೆಯಲಾಗಿತ್ತು. ಯಾವ ಪರಿವರ್ತನೆಯನ್ನು

ನೀವು ನೋಡಬಯಸುತ್ತಿರೋ ಅದು ನೀವೇ ಆಗಿರಿ. ನಿಮ್ಮಿಂದಲೇ ಪರಿವರ್ತನೆಯನ್ನು ಪ್ರಾರಂಭಿಸಿ. ಈ ಗಾಂಧಿ ವಾಕ್ಯ ಮೂರೂ ಗುಂಪನ್ನು ಒಟ್ಟು ಸೇರಿಸಲು ಹಿಂದೆ ನಿಂತಿತ್ತು, ಗಾಂಧಿ ತನ್ನ ಸಾವಿನ ಅರವತ್ತು ವರ್ಷಗಳ ನಂತರವೂ ಕೂಡ ಬರಿಗಾಲಿನಲ್ಲಿ ನಿಂತು ಬ್ರಿಟಿಷ್ ಸರ್ಕಾರಕ್ಕೆ ಸವಾಲು ಎಸೆಯುತ್ತಿದ್ದಾರೆ ಎಂದು ನನಗನಿಸಿತು.

ಜಗತ್ತಿನಲ್ಲಿ ಈ ಮೂರು ದೊಡ್ಡ ಜಾಗತಿಕ ಸಮಸ್ಯೆಗಳಿವೆ. ಮೂರರ ಉತ್ತರ ಗಾಂಧಿಯೇ ಆಗಿದ್ದಾರೆ. ಇದು ಜಗತ್ತಿಗೆ ಅನಿಸುತ್ತಿದೆ ಎಂಬುದನ್ನು ಅತಿಶಯೋಕ್ತಿ ಮಾಡುತ್ತಿಲ್ಲ. ನಾನೆಲ್ಲೆಲ್ಲಿ ಹೋಗಿದ್ದೆನೊ ಅಲ್ಲಲ್ಲಿ ಬೈಬಲ್ ನಂತರ ಗಾಂಧಿಯ ಮಾತುಗಳು ಉದ್ಧೃತವಾಗಿರುವುದನ್ನು ನೋಡಿದ್ದೇನೆ. ಬಂಡವಾಳವಾದದ ಪ್ರಶ್ನೆಗೆ ಗಾಂಧಿಯವರ ಉತ್ತರ ಧರ್ಮದರ್ಶಿತ್ವ, ಬಿಲ್‌ಗೇಟ್ ಮತ್ತು ಬಿಲ್‌ಕ್ಲಿಂಟನ್ ಆ ಬಗ್ಗೆ ಮಾತನಾಡುತ್ತಾರೆ. ಬಿಲ್ ಕ್ಲಿಂಟನ್ ವರ್ಷದಲ್ಲೊಮ್ಮೆ ನ್ಯೂಯಾರ್ಕ್‌ನಲ್ಲಿ ಒಂದು ಸಮ್ಮೇಳನ ನಡೆಸುತ್ತಾರೆ. ಆ ಸಮ್ಮೇಳನದ ಉದ್ಘೋಷ – 'ಉುತಜ – ಕೊಡಿ'. ವಿನೋಬಾರವರ ಸಂಪತ್ತಿದಾನದ ಮಾತು ನೆನಪಿಗೆ ಬರಬಹುದು. ಈ ಮಾತನ್ನೇ ಬಿಲ್ ಕ್ಲಿಂಟನ್ ಮಾತಾಡುತ್ತಿದ್ದಾರೆ. 'ಉುತಜ' ಸಮ್ಮೇಳನ ಮಾಡುತ್ತಾ ಜಗತ್ತಿನ ಕೋಟ್ಯಾಧೀಶ್ವರರನ್ನು ಆಹ್ವಾನಿಸಿ ನೀವು ನಿಮ್ಮ ಸಂಪತ್ತನ್ನು ಏನು ಮಾಡುವಿರಿ; ಅದನ್ನು ಸಮಾಜಕ್ಕೆ ದಾನವಾಗಿ ಕೊಡಿ. ಧರ್ಮದರ್ಶಿತ್ವದ ಭಾಷೆಯನ್ನು ಬಿಲ್‌ಗ್ಲೇಟ್ ಮತ್ತು ವಾರೆನ್ ಬಫೋ ಮಾತನಾಡುತ್ತಿದ್ದಾರೆ. ಅವರೆಲ್ಲರೂ ಸಂಪೂರ್ಣವಾಗಿ ಪರಿವರ್ತಿತರಾಗಿದ್ದಾರೆಂದು ನನಗನಿಸುವುದಿಲ್ಲ. ಆದರೆ ಗಾಂಧಿಯವರ ಉತ್ತರವೇನಿದೆ ಆ ಮಾತನ್ನು ಜಾಗತಿಕ ಹಂತದಲ್ಲಿ ನಾವು ಕೇಳುತ್ತಿದ್ದೇವೆ. ಉಪಭೋಗದ ಅತಿರೇಕದ ಬಗ್ಗೆ ಗಾಂಧಿಯವರ ಉತ್ತರವನ್ನು ನೀವು ಬಲ್ಲಿರಿ. ಪರಿಸರದ ಎಲ್ಲ ಆಂದೋಲನಗಳಲ್ಲಿ ಅದನ್ನು ಎಲ್ಲೆಲ್ಲೂ ಪುನರುಚ್ಛಿಸಲಾಗುತ್ತದೆ. ಹಿಂಸೆಯ ನಿರಾಕರಣೆಯ ಬಗ್ಗೆ ಹೇಳಿದವರಲ್ಲಿ ಗಾಂಧಿಗಿಂತಲೂ ಹೆಚ್ಚಿನವರು ಈ ಶತಮಾನದಲ್ಲಾಗಲೀ ಹಿಂದಿನ ಶತಮಾನದಲ್ಲಾಗಲೀ ಬೇರೆ ಯಾರದೂ ಉತ್ತರವಿಲ್ಲ. ಹೀಗೆ ಜಾಗತಿಕ ಸಮಸ್ಯೆಗಳಿಗೆ ಗಾಂಧಿಯೇ ಉತ್ತರವಾಗಿದ್ದಾರೆ. ಇದು ಎಲ್ಲರಿಗೂ ಗೊತ್ತಿದೆ, ಒಪ್ಪುತ್ತಾರೆ, ಅರ್ಥಮಾಡಿಕೊಳ್ಳುತ್ತಾರೆ. ಆದ್ದರಿಂದ ಜಗತ್ತಿನ ಎಲ್ಲ ಸಮಸ್ಯೆಗಳಿಗೆ ನಾವು ಬಂದಿರುವ ಸೇವಾ ಗ್ರಾಮ್ ಆಶ್ರಮದಲ್ಲಿ ಇಲ್ಲಿಯ ಗಾಂಧಿಯ ಸಂದೇಶ ಬಹಳ ಅನುರೂಪವಾಗಿದೆ, ಯುಗಾನುಕೂಲವಾಗಿದೆ. ಗಾಂಧಿಯ ಸಂದೇಶವನ್ನು ನಾವೆಲ್ಲ ಒಪ್ಪುತ್ತೇವೆ, ಅದು ಎಲ್ಲ ಕಡೆ ಹರಡಲೆಂದು ಬಯಸುತ್ತೇವೆ. ಹಲವಾರು ದಶಕಗಳಿಂದ ಹಗಲು ರಾತ್ರಿ ಯಾವುದಕ್ಕಾಗಿ ಕೆಲಸಮಾಡುತ್ತಿದ್ದೇವೆಯೋ ಆ ಸಂದೇಶ ಕೊನೆಗೆ ಯಾವುದು?

ನಾನು ತಿಳಿದಿರುವಷ್ಟರ ಮಟ್ಟಿಗೆ ಇದು ನಮ್ಮ ಗಾಂಧೀ ವಿಚಾರದ ಬಂಡವಾಳ. ಅತ್ಯಂತ ಕಡಿಮೆ ಮಾತಿನಲ್ಲಿ ಹೇಳುವುದಾದರೆ ಒರ್ವ ಗಾಂಧೀ ನಮಗೆ 'ಹಿಂದ್ ಸ್ವರಾಜ್' ಮತ್ತು 'ಸರ್ವೋದಯ' ಈ ಎರಡರ ಮೂಲಕ ಒಂದು ಹೊಸ ಸಮಾಜ ರಚನೆಯ ಚಿತ್ರ ನಮ್ಮ ಮುಂದೆ ಇಟ್ಟರು. ಹಿಂದ್ ಸ್ವರಾಜ್ ಪುಸ್ತಕದಲ್ಲಿ ಈ ಕಾಲದ

ಪಾಶ್ಚಿಮಾತ್ಯ ನಾಗರೀಕತೆಯ ವಿರುದ್ಧದ ಒಂದು ಬಂಡಾಯವಾಗಿತ್ತು. ನಾಗರೀಕತೆಯ ಬಂಡಾಯದ ಒಂದು ಪ್ರಣಾಳಿಕೆ ಅದಾಗಿತ್ತು. ಹಿಂದ್ ಸ್ವರಾಜ್ ಬಂಡಾಯದ ಘೋಷಣೆಯಾಗಿತ್ತು, ಒಂದು ಚಿತ್ರವಾಗಿತ್ತು. ರಸ್ಕಿನ್ನರ ಪುಸ್ತಕವನ್ನು ಗಾಂಧೀಜಿ ಅನುವಾದ ಮಾಡಿದಾಗ 'ಸರ್ವೋದಯ' ಶಬ್ದವನ್ನು ಹುಡುಕಿ ತೆಗೆದರು. ನಂತರ ಅದನ್ನೇ ಅವರು ವಿಸ್ತೃತಗೊಳಿಸುತ್ತಾ ಹೋದರು. ಹಿಂದ್ ಸ್ವರಾಜ್, ಸರ್ವೋದಯ ಈ ಎರಡು ಪುಸ್ತಕಗಳ ಮೂಲಕ ಸಮಾಜ ರಚನೆ ಹೇಗಿರಬೇಕು ಎಂಬುದರ ಕಲ್ಪನೆಯ ಚಿತ್ರ ನಮ್ಮ ಮುಂದೆ ಇಟ್ಟರು. ಸರ್ವೋದಯದಲ್ಲಿ ಒರ್ವ ಮನುಷ್ಯನ ಹಿತ ಇನ್ನೋರ್ವ ಮನುಷ್ಯನ ಹಿತಕ್ಕೆ ವಿರೋಧವಿಲ್ಲ. ಈ ಮಾತನ್ನು ನಾವು ಇನ್ನೊಂದು ಬಾರಿ ಪುನರುಚ್ಚಿಸುವ ಅಗತ್ಯವಿದೆ. ಏಕೆಂದರೆ ಅರಿವಿಲ್ಲದೆಯೇ ನಾವು ವರ್ಗ ಸಂಘರ್ಷ ಮತ್ತು ಹಿತಗಳ ಸಂಘರ್ಷದ ಮಾತಿನಲ್ಲಿ ಯೋಚಿಸಲಾರಂಭಿಸುತ್ತೇವೆ. ವರ್ಗ ಸಂಘರ್ಷದ ಭಾಷೆಯಲ್ಲಿ ಯೋಚಿಸಲಾರಂಭಿಸಿದಾಗ ವರ್ಗೀಯ ಸಂಘರ್ಷದ ರೂಪದಲ್ಲಿ ಕಾರ್ಯಕ್ರಮಗಳ ಬಗ್ಗೆಯೂ ಯೋಚಿಸಲಾರಂಭಿಸುತ್ತೇವೆ. ಈ ಸಂದರ್ಭದಲ್ಲಿ ನಮ್ಮ ಅಭಿಪ್ರಾಯವೇನು ಎಂಬುದು ಅವಶ್ಯಕವಾಗುತ್ತದೆ? ನಮ್ಮ ಸಮೂಹ ಯಾವುದು? ನಮ್ಮ ಸಮೂಹ ಸರ್ವೋದಯದಾಗಿದೆ: ತೋರಿಕೆಗೆ ಕೆಲ ವರ್ಗಗಳ, ಕೆಲ ಜನರ ಹಿತ ಪರಸ್ಪರರ ವಿರೋಧವಾಗಿದೆ ಅನಿಸಿದರೂ ಕೂಡ ಅಂತಿಮವಾಗಿ ಮನುಷ್ಯರು ಮನುಷ್ಯರ ವಿರುದ್ಧ ಇರುವುದಿಲ್ಲ. ಈ ಗುರಿ ಮುಟ್ಟಲು ನಿಮ್ಮ ಸಾಧನ ಸಾಧ್ಯದ ಅನುರೂಪವೇ ಆಗಿರಬೇಕೆಂದು ಗಾಂಧೀ ನಮಗೆ ಹೇಳಿದರು. ಶುದ್ಧವೇ ಆಗಿರಬೇಕು, ಸಾಧ್ಯ ಒಂದಾದರೆ, ಸಾಧನ ಬೇರೆಯೊಂದಾದರೆ ನಾವು ಭೇರೆಯೇ ಆದ ಗುರಿಗೆ ಮುಟ್ಟುತ್ತೇವೆ. ಇದು ಅವರ ಬಹಳ ವೈಜ್ಞಾನಿಕ ಚಿಂತನೆಯಾಗಿತ್ತು. ನಾವು ಗಾಂಧೀಜಿಯವರು ಹೇಳಿದ ಈ ಮಾತನ್ನು ಪುನಃ ನೆನೆದುಕೊಳ್ಳೋಣ. ನಮ್ಮ ವ್ಯಕ್ತಿಗತ ಹಂತದಲ್ಲಿ ಸಾಧನದ ರೂಪವಾಗಿ ಏಕಾದಶ ವ್ರತವನ್ನು ಹೇಳಿದರು. ಈ ಏಕಾದಶ ವ್ರತಗಳನ್ನು ಸಾಧಕರಾಗಿ ಹೇಗೆ ಪರಿಪಾಲಿಸಬೇಕೆಂಬುದನ್ನು ನಮಗೆ ರಚನಾತ್ಮಕ ಕಾರ್ಯಕ್ಕಾಗಿ, ದಿನ ನಿತ್ಯದ ಕೆಲಸಕ್ಕಾಗಿ ರಚನಾತ್ಮಕ ಕಾರ್ಯಕ್ರಮದ ಸಾಧನ ಕೊಟ್ಟರು. ರಚನಾತ್ಮಕ ಕಾರ್ಯಕ್ರಮದ ಅಂತಿಮ ಪರಿಣತಿ ಸ್ವರಾಜ್ಯ. ಯುಗಾನುಕೂಲ, ಕಾಲಾನುಕೂಲವಾಗಿ ರಚನಾತ್ಮಕ ಕಾರ್ಯಕ್ರಮಗಳು ಬದಲಾಗುವುವು. ಆದರೆ ಯಾವ ರೀತಿಯ ಸಮಾಜ ನಾವು ಬಯಸುತ್ತೇವೊ ಅದೇ ರೀತಿಯಲ್ಲಿ ಜೀವಿಸಲು ಪ್ರಾರಂಭಿಸಬೇಕೆಂಬ ರೀತಿಯನ್ನು ಅವರು ಹೇಳಿದರು. ಹಾಗೆ ಮಾಡಿದಲ್ಲಿ ನೀವು ನಿಮ್ಮ ಗುರಿಯನ್ನು ತಲುಪೇ ಬಿಡುವಿರಿ. ಆದಾಗ್ಯೂ ಅಗತ್ಯ ಬಿದ್ದಲ್ಲಿ ಮೂರನೆಯ ಪ್ರಕಾರದ ಸಾಧನವನ್ನೂ ಕೂಡ ಅವರು ಕೊಟ್ಟರು. ಆ ಸಾಧನ ಸತ್ಯಾಗ್ರಹ. ನಾವು ಹಿಂದಿರುಗಿ ನೋಡಿದರೆ ಸತ್ಯಾಗ್ರಹದಲ್ಲೂ ಕೂಡ ಎರಡು ಪ್ರಕಾರದ ಸತ್ಯಾಗ್ರಹವನ್ನು ಅವರು ಮಾಡಿದರು. ೧೯೨೦ ರಲ್ಲಿ ಸಾಮೂಹಿಕ ಸತ್ಯಾಗ್ರಹ ಮಾಡಿದರು, ೧೯೩೦ ರಲ್ಲಿ ಅಸಹಕಾರ

ಆಂದೋಲನ ಮಾಡಿದರು, ೧೯೪೨ ರಲ್ಲಿ ಉಪ್ಪಿನ ಸತ್ಯಾಗ್ರಹ ಮಾಡಿದರು. ಮೂರೂ ಸಲ ಅವರು ರಾಷ್ಟ್ರೀಯ ಸಾಮೂಹಿಕ ಸತ್ಯಾಗ್ರಹ ಮಾಡಿದರು. ವ್ಯಾಪಕ ಪರಿಣಾಮ ಕೂಡ ಆಯಿತು. ಗಾಂಧೀಜಿ ಸ್ವತಃ ಹೇಳಿದ್ದೇನೆಂದರೆ ಸಾಮೂಹಿಕ ಸತ್ಯಾಗ್ರಹದಲ್ಲಿ ಅಶುದ್ಧತೆ ಉಳಿಯಿತು. ಆದ್ದರಿಂದ ಗಾಂಧೀಜಿಯವರಿಗೆ ಅನೇಕ ಬಾರಿ ಕ್ಷಮೆಯಾಚಿಸಬೇಕಾಯಿತು. ಸತ್ಯಾಗ್ರಹವನ್ನು ಹಿಂದಕ್ಕೂ ಕೂಡ ತೆಗೆದುಕೊಳ್ಳಬೇಕಾಯಿತು. ಅವರು ವ್ಯಕ್ತಿಗತ ಸತ್ಯಾಗ್ರಹ ಮಾಡಿದರು. ಅನೇಕ ಸಲ ಅದು ಉಪವಾಸದ ರೂಪದಲ್ಲಿತ್ತು. ೧೯೪೦ ರಲ್ಲಿ ಪ್ರಥಮ ಸತ್ಯಾಗ್ರಹಿಯನ್ನಾಗಿ ವಿನೋಬಾರವರನ್ನು ಆರಿಸಲಾಯಿತು. ಈ ರೀತಿ ಅವರು ಸತ್ಯಾಗ್ರಹ ಎಷ್ಟು ಶುದ್ಧವಿರಬೇಕೆಂಬುದರ ಬಗ್ಗೆ ತಮ್ಮ ಆಗ್ರಹವಿರುವುದರ ಸಂದೇಶವನ್ನು ಕೊಟ್ಟರು. ಪ್ರಶ್ನೆಯೇನೆಂದರೆ ಸಾಮೂಹಿಕ ಸತ್ಯಾಗ್ರಹದಲ್ಲಿ ಅಶುದ್ಧತೆ ಇರುತ್ತದೆ ಮತ್ತು ವ್ಯಕ್ತಿಗತ ಸತ್ಯಾಗ್ರಹ ಕಠಿಣವಾಗಿರುತ್ತದೆ. ಅಂತಹ ಸತ್ಯಾಗ್ರಹ ಮಾಡಲು ನಾವು ಸಿದ್ಧರಿದ್ದೇವೆಯೇ? ಇವುಗಳಲ್ಲಿ ಯಾವ ಸತ್ಯಾಗ್ರಹ ನಮ್ಮ ಅಳತೆಗೊಳಪಟ್ಟಿದೆ ಎಂಬುದನ್ನು ನಾವು ಆಲೋಚಿಸಬೇಕು. ಅನೇಕ ಬಾರಿ ಸತ್ಯಾಗ್ರಹ ಮಾಡಬೇಕೆಂದು ಅನಿಸುತ್ತದೆ. ಅದು ಆಕರ್ಷಕವೂ ಆಗಿರುತ್ತದೆ. ಆದರೆ ಶುದ್ಧ – ಅಶುದ್ಧ ಎಂಬ ಇಬ್ಬಗೆಯ ಹರಿತ ಕತ್ತಿ ಇದಾಗಿದೆ. ಅಣ್ಣಾ ಹಜಾರೆಯವರ ಮತ್ತು ಅರವಿಂದ ಕೇಜ್ರಿವಾಲ್‌ರವರ ಆಂದೋಲನವನ್ನು ಸಾಮೂಹಿಕ ಸತ್ಯಾಗ್ರಹದ ರೂಪದಲ್ಲಿ ನೋಡಿದ್ದೇವೆ. ಸತ್ಯಾಗ್ರಹ ಅಶುದ್ಧವಾದರೆ ಮತ್ತು ವೈಚಾರಿಕ ಸ್ಪಷ್ಟತೆ ಇರದಿದ್ದರೆ ಸತ್ಯಾಗ್ರಹ ಬಹು ಶೀಘ್ರವಾಗಿ ಸತ್ತಾಗ್ರಹವಾಗುವುದು. ಎಲ್ಲಿಯವರೆಗೆ ನಾನು ಅಧಿಕಾರ ಪಡೆಯುವುದಿಲ್ಲವೊ ಅಲ್ಲಿಯವರೆಗೆ ಸಮಾಜದ ಸುಧಾರಣೆ ಆಗುವುದಿಲ್ಲ ಎಂಬ ತಪ್ಪು ತಿಳುವಳಿಕೆಯಿಂದ ಅಧಿಕಾರದ ಕುರ್ಚಿಯ ಮೇಲೆ ಕುಳಿತುಕೊಳ್ಳುವುದು ಅಷ್ಟೊಂದು ಕೆಟ್ಟ ವಿಚಾರವೇನಲ್ಲ. ಆದರೆ ನನ್ನ ಅಭಿಪ್ರಾಯದಲ್ಲಿ ಇದರಲ್ಲಿ ಒಂದು ವಿಚಾರ ದೋಷವಿದೆ. ಸತ್ಯಾಗ್ರಹದ ಸಾಧನದೊಂದಿಗೆ ಗಾಂಧೀಜಿಯವರು ಯಾವ ಯಾವ ನಿಯಮಾವಳಿಗಳನ್ನು ಹೇಳಿದ್ದಾರೊ ಅವುಗಳನ್ನು ಬಿಟ್ಟು ಸತ್ಯಾಗ್ರಹವನ್ನು ಒಂದು ಸಮಯ ಸಾಧಕ ರೂಪದಲ್ಲಿ ಮಾಡಿದರೆ ಅದು ಬಹಳ ವೇಗದಲ್ಲಿ ಸತ್ತಾಗ್ರಹದ ರೂಪ ಪಡೆಯುವುದು.

ವಿನೋಬಾರವರು ಎರಡನೆಯ ಶಬ್ದವನ್ನು ಉಪಯೋಗಿಸಿದ್ದಾರೆ. ಸತ್ಯಾಗ್ರಹದಲ್ಲಿ ಆಗ್ರಹವೆಂಬುದೇನಿದೆ ಅದರಿಂದಾಗಿ ಗೋಜಲುಂಟಾಗಿದೆ. ಏಕೆಂದರೆ ಆಗ್ರಹ ಮತ್ತು ಸತ್ಯ ಎರಡೂ ಒಟ್ಟಿಗೆ ಇರಲಾರವು. ವಿನೋಬಾಜಿ ದೊಡ್ಡವರಾಗಿದ್ದರು. ಅವರು ಗಾಂಧೀಯನ್ನು ಟೀಕಿಸಿದರು. ಗಾಂಧೀ ತಪ್ಪು ಶಬ್ದವನ್ನು ಆಯ್ಕೆಮಾಡಿದ್ದಾರೆ ಆ ಶಬ್ದವನ್ನು ಅವರು ಆಫ್ರಿಕಾದಲ್ಲಿ ಆಯ್ಕೆ ಮಾಡಿಕೊಂಡರು. ಅದು ಅವರ ಪ್ರಾರಂಭದ ಸಮಯವಾಗಿತ್ತು. ಆದ್ದರಿಂದ ತಪ್ಪಾಯಿತು. ಸತ್ಯದಲ್ಲಿ ಇರುವ ಆಗ್ರಹ ಹಿಂಸಾತ್ಮಕ ಆಗಿರುತ್ತದೆ. ಅದು ಸತ್ಯದೊಂದಿಗೆ ಹೇಗೆ ಇರಲು ಸಾಧ್ಯ. ಆದ್ದರಿಂದ ವಿನೋಬಾ ಒಂದು ಸುಂದರವಾದ ಶಬ್ದ ಕೊಟ್ಟರು. ಸತ್ಯಾಗ್ರಹವಲ್ಲ ಸತ್ಯಾಗ್ರಹಿ ಆಗಬೇಕು.

ಗಾಂಧೀಜಿ ನಮಗೆ ಮೂರು ಸಾಧನಗಳನ್ನು ಕೊಟ್ಟರು. ಒಂದನೇಯದು ಏಕಾದಶವ್ರತ ಅಂದರೆ ನಾವು ಹೇಗೆ ಸ್ವಂತ ಜೀವನ ನಡೆಸಬೇಕು ಎಂದು ತಿಳಿಸಿದರು. ಸಮಾಜದಲ್ಲಿ ನಾವು ಹೇಗಿರಬೇಕೆಂಬುದಕ್ಕೆ ರಚನಾತ್ಮಕ ಕಾರ್ಯಕ್ರಮ ಕೊಟ್ಟರು. ಮೂರನೇಯದು ಇನ್ನು ಯಾವುದೇ ರೀತಿಯಲ್ಲಿ ಸುಧಾರಣೆ ಸಾಧ್ಯವಾಗದಿದ್ದಲ್ಲಿ ಸತ್ಯಾಗ್ರಹದ ಸಾಧನ ಕೊಟ್ಟರು.

ಜಗತ್ತನ್ನು ಬದಲಾಯಿಸಬೇಕಿದೆ, –ವಿಶ್ವವನ್ನು ಬದಲಾಯಿಸಬೇಕಿದೆ ಅದು ಹೇಗೆ ಎಂಬ ಸವಾಲು ನಮ್ಮ ಮುಂದಿದೆ. ರಾಜನೀತಿ ನಿರಾಶೆ ಉಂಟುಮಾಡಿದೆ, ಧರ್ಮಗಳು ನಿರಾಶೆ ಮಾಡಿವೆ, ನೇತಾರರು ನಿರಾಶೆ ಮಾಡಿದ್ದಾರೆ. ಆದರೆ ಜಗತ್ತನ್ನು ಬದಲಾಯಿಸಬೇಕಿದೆ, ಹೇಗೆ ಬದಲಾಯಿಸುವುದು?

ಇವೆಲ್ಲ ಪ್ರಶ್ನೆಗಳು ಜಾಗತಿಕವಾಗಿವೆ. ಈಗಂತೂ ಯಾವುದೇ ಒಂದು ಚಿಕ್ಕ ಅಥವಾ ಸ್ಥಾನೀಯ ವಿಷಯವೇ ಆಗಿರುವುದಿಲ್ಲ. ಆಪಾರದ ಬೆಲೆ ಕೂಡ ಜಾಗತಿಕ ಮಾರುಕಟ್ಟೆಯಲ್ಲಿ ತೀರ್ಮಾನವಾಗುತ್ತದೆ. ಜಾಗತೀಕ ಉಷ್ಣತೆಯೂ ಕೂಡ ಜಾಗತಿಕವಾಗುತ್ತದೆ. ಪ್ರತಿಯೊಂದು ವಿಷಯ ಜಾಗತಿಕ. ನಾನು ಓರ್ವ ಚಿಕ್ಕ ದುರ್ಬಲ ಕಾರ್ಯಕರ್ತನಾಗಿ ಈ ಜಗತ್ತನ್ನು ಹೇಗೆ ಬದಲಾಯಿಸಬಹುದು? ಎಲ್ಲದರ ಪರಿಣಾಮ ಜಾಗತಿಕ. ನನ್ನ ಶಕ್ತಿ ಬಹಳ ಸೀಮಿತ. ಜಗತ್ತನ್ನು ಹೇಗೆ ಬದಲಾಯಿಸುವುದು? ಅದಕ್ಕಾಗಿ ಪರಿವರ್ತನೆಯ ಹೊಸ ದೃಷ್ಟಿ ಕೋನವನ್ನು ಹೊಂದಬೇಕು. ಪುರಾಣದಲ್ಲಿ ನಮಗಾಗಿ ಒಂದು ಕಥೆಯಿದೆ. ಕಾರ್ತಿಕ ಮತ್ತು ಗಣಪತಿಯಲ್ಲಿ ಯಾರು ದೊಡ್ಡವರೆಂಬ ಸ್ಪರ್ಧೆಯಿದೆ. ಕಾರ್ತಿಕ ಇಡೀ ವಿಶ್ವವನ್ನು ಪ್ರದಕ್ಷಿಣೆ ಮಾಡಿ ಬಂದಾಗ ಗಣೇಶ ತನ್ನ ಸುತ್ತಮುತ್ತ ತಿರುಗುತ್ತಾನೆ. ಗಣೇಶ ಪೃಥ್ವಿಯ ಪ್ರದಕ್ಷಿಣೆ ಮಾಡಿದನೆಂದು ತೀರ್ಮಾನವಾಗುತ್ತದೆ. ಏಕೆಂದರೆ ನಮ್ಮಲ್ಲಿಯೇ ಪೂರ ವಿಶ್ವವಿದೆ. ಇಡೀ ವಿಶ್ವವನ್ನು ಬದಲಾಯಿಸಬೇಕಾದರೆ ಇಡೀ ವಿಶ್ವದಲ್ಲೆಲ್ಲ ಓಡುವ ಅಗತ್ಯವಿದೆ. ಎಲ್ಲಿಯವರೆಗೆ ಓಡುವಿರೀ ಹೇಗೆ ಓಡುವಿರೀ? ನಮ್ಮ ಒಳಗೆ ಪರಿವರ್ತನೆಯ ಸಾಧನವನ್ನು ಹುಡುಕಿಕೊಳ್ಳಬೇಕು. ಎಲ್ಲಿಯವರೆಗೆ ಸ್ವತಃ ಬದಲಾಗುವುದಿಲ್ಲವೊ ಅಲ್ಲಿಯವರೆಗೆ ಎರಡನೇಯವರು ಬದಲಾಗಲೀ ಎಂಬ ಮಾತನ್ನು ಹೇಳಲು ಅಧಿಕಾರವಿಲ್ಲವೆಂದು ಗಾಂಧೀಜಿ ತತ್ವ ಬದ್ಧ ಮಾತನ್ನು ಹೇಳಿದ್ದಾರೆ.


ಇದುವರೆಗೆ ನಾನು ಮಾತನಾಡಿದುದಲ್ಲಿ ಹೊಸದೇನುಯಿಲ್ಲ. ಈ ಸೇವಾಗ್ರಾಮ ಆಶ್ರಮ ನಮಗೆ ಏನೆಲ್ಲಾ ಸಂದೇಶ ಕೊಟ್ಟಿದೆಯೋ ಅದನ್ನೇ ನಿಮ್ಮ ಮುಂದೆ ಇಟ್ಟಿದ್ದೇನೆ.

ಅನು–ಸುಕೌ

ತಿಂಗಳ ಸುತ್ತಿನ ಮಹಾಮಹಿಮರು


– ಡಾ.ಸುಂದರ ಕೇನಾಜೆ, ಸುಳ್ಯ ದ.ಕ ಜಿಲ್ಲೆ.
ಮೊ: ೯೪೪೮೯೫೧೮೪೯











ಅದೇನು ಕಾಕತಾಳಿಯವೋ? ಈ ಎಪ್ರೀಲ್ ಮೇ ತಿಂಗಳಲ್ಲಿ ಜಗತ್ತು ಕಂಡ ಮಹಾನ್ ಪುರುಷರ ಸಾಲು ಸಾಲು ನೆನಪುಗಳು ಮುಂದೆ ಬಂದು ನಿಲ್ಲುತ್ತದೆ. ಎಪ್ರೀಲ್ ತಿಂಗಳಲ್ಲಿ ಮಹಾವೀರ ಮತ್ತು ಅಂಬೇಡ್ಕರ್ ಜಯಂತಿ, ಏಸುವನ್ನು ನೆನಪಿಸುವ ಗುಡ್ ಫ್ರೈಡೆ, ಮೇ ತಿಂಗಳಲ್ಲಿ ಬಸವ ಮತ್ತು ಬುದ್ಧ ಜಯಂತಿ. ಹೀಗೆ, ಎಲ್ಲವೂ ಎರಡು ತಿಂಗಳಲ್ಲಿ ರಜೆ ಅನುಭವಿಸುವ ದಿನಗಳು ಎಂದು ಮಾತ್ರ ಯೋಚಿಸಿದರೆ ಬೇರೇನೂ ಕಾಣದು. ಅದರ ಹೊರತಾಗಿ ನೋಡಿದರೆ ಇನ್ನು ಏನೇನೋ ಕಾಣುತ್ತದೆ. ಹಾಗೆ ನೋಡಿದರೆ ಜಗತ್ತಿಗೆ ಹೊಸತೆನಿಸಿದ ಗಾಂಧೀಜಿಯ ಯುದ್ಧಾಸ್ತ್ರವಾದ ಸತ್ಯಾಗ್ರಹವೆಂಬ ಚಾರಿತ್ರಿಕ ಆಶ್ರಮ ಸ್ಥಾಪನೆ ಯಾದುದು, 'ಪ್ರಜಾಸತ್ತಾತ್ಮಕ ವರ್ಣಬೇಧ ರಹಿತ ದಕ್ಷಿಣ ಆಫ್ರೀಕಕ್ಕಾಗಿ ನಾನು ಸಾಯಲು ಸಿದ್ಧ' ಎಂಬ ಚಾರಿತ್ರಿಕ ಭಾಷಣ ಮಾಡಿ ಇಪ್ಪತೇಳು ವರ್ಷ ಜೈಲು ಅನುಭವಿಸಿದ, ನಂತರ ಬಿಡುಗಡೆಯಾಗಿ ಮೊದಲ ಮತ ಚಲಾಯಿಸಿದ ಮತ್ತು ದ.ಆಫ್ರೀಕಾದ ಮೊದಲ ಕರಿಯ ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸಿದ ನೆಲ್ಸನ್ ಮಂಡೇಲರ ಬದುಕಿನ ಈ ಮಹತ್ವದ ದಿನಗಳು ಘಟಿಸಿದ್ದೂ ಇದೇ ಎಪ್ರೀಲ್– ಮೇ ತಿಂಗಳಲ್ಲಿ. ಇಲ್ಲಿ ಇವರೆಲ್ಲರನ್ನು ನೆನಪಿಸಲು ಇದೊಂದು ನೆಪ ಮಾತ್ರ.

ಕಾಲಘಟ್ಟಗಳ ಹಿನ್ನಲೆಯಲ್ಲಿ ಈ ಮಹಾನ್ ವ್ಯಕ್ತಿಗಳು ಒಬ್ಬರ ನಂತರ ಮತ್ತೊಬ್ಬರ ಮೇಲೆ ಬೀರಿದ ಪ್ರಭಾವಗಳನ್ನು ಎಂದಿಗೂ ಅಲ್ಲಗಳೆಯಲು ಸಾಧ್ಯವಿಲ್ಲ. ಅಂದರೆ ಮಹಾವೀರನಿಂದ ಆರಂಭಗೊಂಡ ಈ ಚಾರಿತ್ರಿಕ ವ್ಯಕ್ತಿತ್ವ ಸಮಕಾಲೀನ ಬುದ್ಧನ ಮೇಲೆ, ಇವರಿಬ್ಬರೂ ಬಸವಣ್ಣನ ಮೇಲೆ, ಭಾರತೀಯ ನೆಲೆಗಟ್ಟು ಮತ್ತು ಕಾಲದ ಮಿತಿಯನ್ನು ಬಿಟ್ಟು ಈ ಮೂವರು ಹಾಗೂ ಕಾರಣಿಕ ಪುರುಷ ಏಸು- ಈ ಯುಗದ ಕೊನೆಯ ಸಮಕಾಲೀನ ಕೊಂಡಿಗಳಾದ ಗಾಂಧಿ,ಅಂಬೇಡ್ಕರ್‌ರ ಮೇಲೆ ಇವರೆಲ್ಲರು ಮಂಡೇಲರ ಮೇಲೆ ಬೀರಿರಬಹುದಾದ ಪ್ರಭಾವವನ್ನು ಅಧ್ಯಯನಾತ್ಮಕವಾಗಿ ಒಪ್ಪಿಕೊಳ್ಳಬೇಕು. ಬರೆಯುವ ಚರಿತ್ರೆ ಕಟ್ಟಿಕೊಳ್ಳುವುದಕ್ಕೂ ಮುನ್ನ ಈ ದೇಶದ ಮನಸ್ಥಿತಿಯ ಮೇಲೆ ಮಹಾವೀರ,ಬುದ್ಧ, ಬಸವ ಹೆಚ್ಚೇಕೆ ಆಧುನಿಕ ಶಿಕ್ಷಣ ಜಾರಿಗೆ ಬಂದ ನಂತರವೂ ಕುರಿತೋದದೆ ಪ್ರಚಾರಕ್ಕೆ ಬಂದವರಲ್ಲಿ ಗಾಂಧಿ,ಅಂಬೇಡ್ಕರರು ಮೊದಲನೇ ಸಾಲಿನಲ್ಲಿ ನಿಲ್ಲುತ್ತಾರೆ. ನಮ್ಮ ಸುತ್ತಮುತ್ತ ಮೌಖಿಕವಾಗಿ ಪ್ರಚಲಿತವಾಗಿರುವ ಜನಪದ ವೀರರಂತೆ ಈ ಚಾರಿತ್ರಿಕ ಪುರುಷರು ಜನಮಾನಸದಲ್ಲಿ ಆರಾಧ್ಯಗೊಂಡಿದ್ದಾರೆ. ಇಂದಿಗೂ ಇವರನ್ನು ಲಘುವಾಗಿ ಪರಿಗಣಿಸುವ ಮತ್ತು ಇವರನ್ನು ಮೀರುವ ವ್ಯಕ್ತಿತ್ವದ ರೂಪೀಕರಣ ಈ ದೇಶಕ್ಕೆ ಬಿಡಿ, ಜಗತ್ತಿಗೇ ಸಾಧ್ಯವಾಗಿಲ್ಲ. ಹಾಗಾಗಿ ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಈ ದೇಶದ ನಾಲ್ಕು ಆಧಾರ ಸ್ತಂಭಗಳು.

ಇದು ಹೇಗೆ ಹೀಗಾಯಿತು ಎನ್ನುವ ಪ್ರಶ್ನೆಗೆ ನೀಡಬಹುದಾದ ಸಾಮಾನ್ಯ ಉತ್ತರ ಇಷ್ಟೆ, ಸೊನ್ನೆಯಿಂದ ತನ್ನನ್ನು ಕಟ್ಟಿಕೊಂಡ ಅಂಬೇಡ್ಕರ್, ಹಾಗೇ ರೋಯಲ್ ವ್ಯವಸ್ಥೆಯನ್ನು ಧಿಕ್ಕರಿಸಿ ನಡೆದ ಬುದ್ಧ,ಬಸವ,ಗಾಂಧಿ ಈ ನಾಲ್ವರಿಗೂ ಅಧಿಕಾರ ಮತ್ತು ಸಂಪತ್ತಿನ ಬದಲು ಕಂಡದ್ದು ಕೇವಲ ಮನುಷ್ಯ ಜೀವ ಮಾತ್ರ. ಇವರ ಮನುಷ್ಯ ಜೀವದ ಉಳಿವಿನ ಹಿಂದಿದ್ದದ್ದು ಪ್ರೀತಿ ಎನ್ನುವ ಸತ್ಯ, ಸಮಾನತೆ ಎನ್ನುವ ತತ್ವ, ಅಹಿಂಸೆ ಎನ್ನುವ ಅಸ್ತ್ರ ಮತ್ತು ಸ್ವಾತಂತ್ರ್ಯ ಎನ್ನುವ ಮುಕ್ತಿ. ಹಾಗಾಗಿ ಇವರು ಇದನ್ನು ಅನುಭವಿಸಿದರು ಮತ್ತು ಇತರರು ಅನುಭವಿಸುವಂತೆ ಪ್ರೇರೇಪಿಸಿದರು. ಸಮಾಜ ತನಗೊಬ್ಬನಿಗಾಗಿ ಹಾಗೂ ತಾನು ಸಮಾಜದಿಂದ ಪಡೆಯುದಕ್ಕಾಗಿ ಎನ್ನುವ ಅಭಿವೃದ್ಧಿತ ಮಾನವ ಲೋಲುಪತೆಯಿಂದ ಈ ಮಹಾತ್ಮರಿಗೆ ಯಾವಾಗ ಹೊರಬರಲು ಸಾಧ್ಯವಾಯಿತೋ ಅಂದಿನಿಂದ ಇವರು ಭೌತಿಕವಾಗಿ ಇಲ್ಲದಿದ್ದರೂ ಜನರ ಮಧ್ಯೆ ಸ್ಥಾಯಿಯಾದರು. ಈ ಜಗತ್ತು ಅದೆಷ್ಟು ಚಾರಿತ್ರಿಕ ನಾಯಕರನ್ನು ಕಂಡಿದ್ದರೂ ಒಬ್ಬ ಬುದ್ಧ, ಒಬ್ಬ ಬಸವ, ಒಬ್ಬ ಗಾಂಧಿ- ಅಂಬೇಡ್ಕರರನ್ನು ಕಂಡಂತೆ ಆಗಲೇ ಇಲ್ಲ.(ಮಂಡೇಲರನ್ನು ಹೊರತು ಪಡಿಸಿ) ಯಾಕೆಂದರೆ ಇವರ ನಂತರ ಅಂತಹದ್ದೇ

ಒಂದು ನಿರ್ವ್ಯಾಜ ಮಾನವ ಪ್ರೀತಿಯನ್ನು ನೀಡುವ ಜನನಾಯಕನನ್ನು ಈ ಜಗತ್ತು ಕಂಡೇ ಇಲ್ಲ. ಇವರು ಹೇಳಿದ 'ನನ್ನ ಜನ' ಎನ್ನುವ ಪರಿಕಲ್ಪನೆ ಎಷ್ಟು ವಿಶೇಷಿತವೆಂದರೆ ಜನರ ಮಧ್ಯೇ ಇದ್ದು ಜನರಲ್ಲದೇ ಇರುವವರನ್ನು ಕುರಿತಾದದ್ದು. ಜನರ ಮಧ್ಯೆ ಇದ್ದು ಜನರಲ್ಲದಂತೆ ಇದ್ದವರಲ್ಲಿ ಈ ಜಗತ್ತಿನ ಸಮಸ್ತ ಮಾನವ ಕೋಟಿಯೂ ಒಳಗಾಗಿತ್ತು ಎನ್ನುವದೇ ಒಂದು ಅದ್ಭುತ ಸತ್ಯ. ಇಂದು ಇದೊಂದು ಚಾರಿತ್ರಿಕ ಸತ್ಯವಾಗಿರಬಹುದು. ಆದರೆ ಬುದ್ಧ, ಏಸು, ಬಸವ, ಗಾಂಧಿ, ಅಂಬೇಡ್ಕರ್ ಮಂಡೇಲರಂತವರಿಗೆ ಇದು ಅವರ ಜೀವಿತಾವಧಿಯಲೇ ಅರಿವಾದ ಮತ್ತು ಅನುಭವವೇ ಹೇಳಿಕೊಟ್ಟ ಸತ್ಯ. ಆದ್ದರಿಂದಲೇ ಅವರು ಉಳಿದ ಸುಧಾರಕರಿಗಿಂತ ಭಿನ್ನವಾಗಿ ಸಾಮಾನ್ಯ ಜನರ ಮಧ್ಯೆಯೂ ಉಳಿದರು.

ಪುರಾಣ ಪುರುಷರ ಕಾಲ್ಪನಿಕ ಉದ್ಧಾರಕ್ಕೂ ಚಾರಿತ್ರಿಕ ವ್ಯಕ್ತಿಗಳ ವಾಸ್ತವಿಕ ಸುಧಾರಣೆಗಳಿಗೂ ಬಹಳ ವ್ಯತ್ಯಾಸವಿದೆ. ಅನೇಕ ಬಾರಿ ನಮ್ಮ ಅನೇಕ ಚಾರಿತ್ರಿಕ ವ್ಯಕ್ತಿಗಳು ಕಾಲ್ಪನಿಕ ಪುರುಷರ ಉದ್ಧಾರವನ್ನೇ ಯತಾವತ್ತು ಮಾಡಲು ಹೋಗಿ ಸೋತದ್ದಿದೆ. ಅತಿಮಾನುಷ ವರ್ಣನೆಗಳನ್ನು ಮಾನುಷ ಪ್ರಕ್ರಿಯೆಗೆ ಒಳಪಡಿಸುವ ಹಂತದಲ್ಲಿ ನಡೆದ ಈ ಸೋಲು ಪಾಠವಾಗಿ ಮಾರ್ಪಡಿಸಿದವರೆಲ್ಲರೂ ಗೆದ್ದಿದ್ದಾರೆ. ಅಂತಹಾ ಗೆಲುವನ್ನು ಕಂಡವರಲ್ಲಿ ಬುದ್ಧ, ಏಸು, ಬಸವ, ಗಾಂಧಿ, ಅಂಬೇಡ್ಕರ್ ಅಗ್ರಗಣ್ಯರು. ತಾವು ಕೇಳಿಸಿಕೊಂಡ ಕಾಲ್ಪನಿಕ ಸುಧಾರಣೆಗಳನ್ನೇ ತತ್ವ, ಸಿದ್ಧಾಂತದ ಹಿನ್ನಲೆಯಲ್ಲಿ ಅನ್ವಯಿಕಗಳಿಸುವಲ್ಲಿ ತೆಗೆದುಕೊಂಡ ಎಚ್ಚರವೇ ಅವರ ಯಶಸ್ಸಿನ ಗುಟ್ಟು, ಅಂದರೆ ಕಲ್ಪನೆ ಮತ್ತು ವಾಸ್ತವವನ್ನು ಅಳೆದು ತೂಗಿ ಅನುಸರಿಸುವ ವ್ಯಕ್ತಿತ್ವವನ್ನು ರೂಢಿಸಿಕೊಂಡವರು ಮಹಾಪುರುಷರಾಗಿರುತ್ತಾರೆ ಎನ್ನುದರಲ್ಲಿ ಸಂಶಯವಿಲ್ಲ.

ಹಾಗೆಂದ ಮಾತ್ರಕ್ಕೆ ಇವರಿಗೆ ಸವಾಲುಗಳೇ ಇರಲಿಲ್ಲ ಎಂದರ್ಥವಲ್ಲ. ಸವಾಲುಗಳನ್ನು ಸಮನ್ವಯಗೊಳಿಸುವ ಜಾಣ್ಮೆಯೇ ಇವರಲ್ಲಿ ಒಂದು ಹೋರಾಟ. ಈ ಹೋರಾಟದ ವಿಭಿನ್ನ ಮುಖಗಳೇ ಅಹಿಂಸೆ, ಪ್ರೀತಿ, ಅನುಭವಮಂಟಪ, ಜಾತೀವಿನಾಶ, ಸತ್ಯಾಗ್ರಹ, ದಲಿತ ಶಿಕ್ಷಣ, ವರ್ಣಬೇಧ ರಹಿತ ಇತ್ಯಾದಿಗಳು. ಇವು ಎರಡು ಮನಸ್ಥಿತಿಗಳ ಮಧ್ಯೆ ನಡೆಯುವ ಹೋರಾಟವೇ ಹೊರತು ಕತ್ತಿದೊಣ್ಣೆ, ಬಾಂಬ್‌ಗಳ ಪ್ರಯೋಗಗಳಲ್ಲ. ಚರಿತ್ರೆ ಪೂರ್ತಿ ಕತ್ತಿ ದೊಣ್ಣೆಯ ಹೋರಾಟಗಳನ್ನೇ ಕಂಡ ಜನರಿಗೆ ಈ ಹೊಸ ಪ್ರಯೋಗದಿಂದ ಆಶ್ಚರ್ಯವೂ ಅನುಮಾನವೂ ಉಂಟಾಗದೇ ಇರಲಿಲ್ಲ. ಅದೇ ಇಂದಿಗೂ ಈ ಮಹಾಪುರುಷರಲ್ಲಿ ಉಳಿದುಕೊಂಡ ಆಶ್ಚರ್ಯ ಮತ್ತು ಅನುಮಾನ. ಅಂದರೆ ಕಾಲ್ಪನಿಕವನ್ನು ವಾಸ್ತವ ಮಾಡಿರುವುದು

ಪವಾಡವಲ್ಲದೇ ಇನ್ನೇನು ಎನ್ನುವುದೇ ಅರಿವಿನ ಕೊರತೆಯ ಆಶ್ಚರ್ಯ. ಬುದ್ಧ ಅಹಿಂಸೆಯನ್ನು ಪ್ರಯೋಗಿಸಿದಾಗ, ಏಸು ಪ್ರೀತಿಯನ್ನು ತೋರಿಸಿದಾಗ, ಬಸವ ಜಾತ್ಯಾತೀತತೆಯನ್ನು ಪ್ರತಿಪಾದಿಸಿದಾಗ, ಗಾಂಧಿ ಸತ್ಯಾಗ್ರಹದ ದಾರಿ ಹಿಡಿದಾಗ ಅಂಬೇಡ್ಕರ್ ಸಮಾನತೆಗೆ ಒತ್ತುಕೊಟ್ಟಾಗ ಮತ್ತು ಮಂಡೇಲಾ ವರ್ಷಾನುಗಟ್ಟಲೆ ಜೈಲನ್ನು ಸ್ವೀಕರಿಸಿದಾಗಲೆಲ್ಲ ಜನರು ಅರಿವಿನ ಕೊರತೆಯ ಆಶ್ಚರ್ಯ ಮತ್ತು ಅನುಮಾನಕ್ಕೆ ತುತ್ತಾಗಿದ್ದರು. ಅದೇ ಇವರಿಗೆ ಅವಮಾನದ ಬಳುವಳಿಯನ್ನೂ ನೀಡಿತ್ತು.

ಈ ಹಿನ್ನಲೆಯಲ್ಲಿ ಗಾಂಧಿ ಹೇಳಿದ ಮಾತೊಂದನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳಲೇಬೇಕು, 'ಒಬ್ಬನಿಂದ ಯಾವುದು ಸಾಧ್ಯವೋ ಅದು ಎಲ್ಲರಿಂದಲೂ ಸಾಧ್ಯ' ಎನ್ನುವ ಮಾತಿನ ಹಿಂದೆ ಈ ಎಲ್ಲರ ಪರಿಶ್ರಮದ ಸತ್ಯ ಅಡಗಿದೆ. ಅಹಿಂಸೆ ಎನ್ನುವುದು ಪ್ರತಿಪಾದನೆ ಮಾತ್ರವಲ್ಲ, ಪ್ರಯೋಗ ಕೂಡ. ಹಾಗೇ ಸತ್ಯಾಗ್ರಹವೆನ್ನುವುದು ಸತ್ಯದ ಆಗ್ರಹ ಮಾತ್ರವಲ್ಲ, ಅನುಭವ ಕೂಡ. ಅದೇ ರೀತಿ ಸಮಾನತೆ ಮತ್ತು ಸ್ವಾತಂತ್ರ್ಯವೆನ್ನುವುದು ಜೀವವೇ ಹೊರತು ಜೀವನವಲ್ಲ. ಆದರೆ ಈ ಸಾಧ್ಯತೆಗಳ ಪ್ರತಿಪಾದನೆಯ ಹಿಂದೆ ಹುಟ್ಟಿಕೊಳ್ಳುವ ಪ್ರತಿರೋಧಗಳು ಮಹಾತ್ಮರಿಗೆ ಸವಾಲುಗಳಲ್ಲ. ಬದಲಾಗಿ ಫಲಿತಾಂಶಗಳು. ಈ ಫಲಿತಾಂಶಗಳೇ ವರ್ಷಾನುವರ್ಷಗಳಿಂದ ಉಳಿದು ಬಂದ ಚಾರಿತ್ರಿಕ ಮೌಲ್ಯಗಳು. ಅಗಾಧ ಶ್ರಮ ವ್ಯಯಿಸಿ ಮಥಿಸಿ ಹೊರತೆಗೆದ ಅಮೃತಗಳು. ಈ ಅಮೃತಕ್ಕೆ ಸಾವಿಲ್ಲದ ಕಾರಣ ಈ ಇವುಗಳನ್ನು ವಾಸ್ತವಿಕವಾಗಿ ಅನ್ವೇಷಿಸಿ ಹೊರತೆಗೆದ ಮಹಾಪುರುಷರಿಗೂ ಸಾವಿಲ್ಲ. ಯಾಕೆಂದರೆ ನೋವಿರುವ,ಭಿನ್ನತೆ ಇರುವ ಹಾಗು ಅಜ್ಞಾನದ ರೋಗಗ್ರಸ್ತ ಬದುಕು ಯಾರಿಗೂ ಬೇಡ, ಹಾಗೆಂದು ಅದನ್ನು ಮೀರುವ ದಾರಿಗಳನ್ನು ಕಂಡುಕೊಳ್ಳುವ ಹೆರಿಗೆಯ ಸುಖವೂ ಬೇಡ. ಈ ವೈರುಧ್ಯಗಳೇ ಮಹಾತ್ಮರಿಗೂ ಉಳಿದವರಿಗೂ ಇರುವ ವ್ಯತ್ಯಾಸ. ಮಾನವ ಪರ ಸಿದ್ಧಾಂತಗಳಿಲ್ಲದ ವರ್ತಮಾನದ ನಾಯಕರು ಮತ್ತು ಕಾಲ್ಪನಿಕ ಮೌಲ್ಯಗಳನ್ನೇ ವಾಸ್ತವಗೊಳಿಸಿದ ಮಹಾತ್ಮರನ್ನು ಒಂದೇ ತಕ್ಕಡಿಯಲ್ಲಿ ತೂಗುವುದೇ ಅರಿವಿನ ಕೊರತೆಯ ಒಂದು ರೂಪ ಮತ್ತು ಇದೇ ಮಾನವ ಚರಿತ್ರೆಯ ವ್ಯಂಗ್ಯ ಕೂಡ.

ಪ್ರಕೃತಿಯಲ್ಲಿಯ ಸೊಬಗು!

– ವಿನೋಬಾ

ವಿನೋಬಾ ೧೯೩೨ ರಲ್ಲಿ ಅಸಹಕಾರ ಚಳುವಳಿಯಲ್ಲಿ ಭಾಗಿಯಾಗಿ ಬಂಧಿತರಾದರು. ಅವರನ್ನು ಮಹಾರಾಷ್ಟ್ರದ ಧುಳೆ ಕಾರಾಗೃಹದಲ್ಲಿ ಇಟ್ಟರು. ಅಲ್ಲಿದ್ದ ಎಲ್ಲ ಬಂಧಿತರನ್ನು ಗೀತೆ ಕುರಿತು ವಿನೋಬಾ ಪ್ರವಚನ ನೀಡಿದರು. ಎಲ್ಲೆಡೆಯಲ್ಲೂ, ಎಲ್ಲ ಜೀವಿಗಳಲ್ಲೂ ಪರಮಾತ್ಮನನ್ನು ಕಾಣಬೇಕೆಂಬ ವಿಚಾರ ತಿಳಿಸಲು ವಿನೋಬಾ ಕೆಲವು ದೃಷ್ಟಾಂತ ಕೊಟ್ಟರು. ಅವು ಚಿತ್ತಾಕರ್ಷಕವಾಗಿ ಇವೆಯಲ್ಲದೆ ಪ್ರಕೃತಿಯಲ್ಲಿಯ ಸೊಬಗನ್ನು ವರ್ಣಿಸುತ್ತವೆ. ಪರಿಸರ ರಕ್ಷಣೆಗೆ ಪ್ರೇರಣೆಯನ್ನೂ ಕೊಡುತ್ತದೆ. ಈ ಲೇಖನ ಓದಿ ಸಂತೋಷಪಡಿ.



ತಾಯಿ

ಮೊಟ್ಟ ಮೊದಲನೆಯ ಪರಮಾತ್ಮನ ಮೂರ್ತಿ ತಾಯಿ. 'ಮಾತೃದೇವೋಭವ' ಎಂದು ಹೇಳುತ್ತದೆ ಶ್ರುತಿ; ಹುಟ್ಟುತ್ತಲೂ ಮಗುವಿಗೆ ತಾಯಿಯ ದರ್ಶನ. ವಾತ್ಸಲ್ಯರೂಪದಿಂದ ಪರಮಾತ್ಮನ ಮೂರ್ತಿಯೇ ಅಲ್ಲಿ ನಿಂತಹಾಗಿರುತ್ತದೆ. ಈ ತಾಯಿಯ ವ್ಯಾಪ್ತಿಯನ್ನೇ ಬೆಳೆಸಿ 'ವಂದೇ ಮಾತರಂ' ಎಂದು ರಾಷ್ಟ್ರಮಾತೆಯನ್ನೂ ಮುಂದೆ ಭೂಮಾತೆ ಪೃಥ್ವಿಯನ್ನೂ ಪೂಜಿಸುತ್ತೇವೆ. ಆದರೆ ಮೊದಲಿಗೆ ಮಗುವಿನ ಎದುರು ನಿಂತ ಪರಮಾತ್ಮನ ಉಚ್ಚ ಪ್ರತಿಮೆ ತಾಯಿಯದೇ! ತಾಯಿಯ ಪೂಜೆಯಿಂದ ಮುಕ್ತಿ ದೊರೆಯುವುದೇನೂ ಅಸಾಧ್ಯವಲ್ಲ. ತಾಯಿಯ ಪೂಜೆ ಎಂದರೆ ವಾತ್ಸಲ್ಯ ರೂಪದಿಂದ ಬಂದ ಪರಮಾತ್ಮನ ಪೂಜೆ. ತಾಯಿ ನಿಮಿತ್ತಮಾತ್ರ, ತನ್ನೊಳಗೆ ಇಷ್ಟೊಂದು ವಾತ್ಸಲ್ಯವೇಕೆ ಎಂಬುದು ಆಕೆಗೆ ತಿಳಿಯದು. ಇಳಿ ವಯಸ್ಸಿನಲ್ಲಿ ಉಪಯೋಗಕ್ಕೆ ಬರಲಿ ಎಂಬ ಲೆಕ್ಕಾಚಾರದಿಂದ ಆಕೆ ಮಗುವಿನ ಸೇವೆ ಮಾಡಿತ್ತಾಳೇನು? ಛೇ! ಆಕೆ ಮಗುವನ್ನು ಹೆತ್ತಳು, ಬೇನೆ ಅನುಭವಿಸಿದಳು. ಆ ನೋವೇ ಆಕೆಗೆ ಆ ಮಗುವಿನ ಬಗ್ಗೆ ಗೀಳು ಹುಟ್ಟಿಸಿತು. ಅವಳನ್ನು ವತ್ಸಲೆಯನ್ನಾಗಿ ಮಾಡಿದ್ದು ಆ ಬೇನೆಯೇ. ಮಗುವನ್ನು ಪ್ರೀತಿಸದಿರಲೂ ಅವಳಿಂದ ಸಾಧ್ಯವಿಲ್ಲ. ನಿಸ್ಸೀಮ ಸೇವೆಯ ಮೂರ್ತಿ ಆ ತಾಯಿ! ಅತ್ಯುತ್ಕೃಷ್ಟ ಪರಮೂತ್ಮನ ಪೂಜೆ ಈ

ತಾಯಿಯ ಪೂಜೆ. ಈಶ್ವರನನ್ನು ಕರೆಯುವುದು ತಾಯಿ ಎಂತಲೇ. ಇದಕ್ಕಿಂತ ಉಚ್ಚ ಶಬ್ದವಿನ್ನೆಲ್ಲಿ? ತಾಯಿ ಎಂಬುದು ಮೊದಲನೆಯ ಸ್ಪಷ್ಟ ಶಬ್ದ. ಅಲ್ಲಿ ಈಶ್ವರನನ್ನು ಕಾಣಲು ಕಲಿಯಬೇಕು. ಆಮೇಲೆ ತಂದೆ, ಗುರು ಮೊದಲಾದವರಲ್ಲಿ ದೇವರನ್ನು ಕಾಣಬಹುದು. ಗುರು ಶಿಕ್ಷಣ ಕೊಡುತ್ತಾನೆ. ಪಶುಗಳಂತಿದ್ದವರನ್ನು ಮಾನವರನ್ನಾಗಿ ಮಾಡುತ್ತಾನೆ. ಎಂಥ ಉಪಕಾರ ಆತನದು! ಮೊದಲು ತಾಯಿ ಆಮೇಲೆ ತಂದೆ ಆನಂತರ ಗುರು ಆಮೇಲೆ ಸಾಧು ಶರಣರು ತೀರ ಸ್ಪಷ್ಟ ರೂಪದಲ್ಲಿರುವ ಈ ದೇವರನ್ನು ಮೊದಲು ಕಾಣಲು ಕಲಿಯಬೇಕು. ಇಲ್ಲಿ ಆತ ಕಾಣಿಸದಿದ್ದರೆ ಇನ್ನೆಲ್ಲಿ ಕಾಣಿಸಿಯಾನು?

ಮಕ್ಕಳು



ತಾಯಿ, ತಂದೆ, ಗುರುಗಳಲ್ಲಿ ದೇವರನ್ನು ಗುರುತಿಸಿದ ಹಾಗೇ ಚಿಕ್ಕಮಕ್ಕಳಲ್ಲಿ ಸಹ ಆತನನ್ನು ಗುರುತಿಸುವುದಾದರೆ ಎಷ್ಟು ಸೊಗಸು! ಧ್ರವ, ಪ್ರಹ್ಲಾದ, ನಚುಕೇತ, ಸನಕ, ಸನಂದನ, ಸನತ್ಕುಮಾರ ಎಲ್ಲರೂ ಪುಟ್ಟ ಪುಟ್ಟ ಮಕ್ಕಳೇ. ಅವರ ವರ್ಣನೆಗಳಲ್ಲಿ ವ್ಯಾಸ್ಯಾದಿಗಳು, ಪುರಾಣಕಾರರು ತಲ್ಲೀನರಾಗಿ ಹೋಗಿದ್ದಾರೆ. ಶುಕದೇವ, ಶಂಕರಾಚಾರ್ಯರು, ಬಾಲಕರೇ. ಅವರ ರೂಪದಲ್ಲಿ ಪರಮೂತ್ಮ ಎಷ್ಟು ಶುದ್ಧ ರೀತಿಯಲ್ಲಿ ಪ್ರಕಟವಾದನೋ ಹಾಗೆ ಇನ್ನೆಲ್ಲೂ ಪ್ರಕಟವಗಲಿಲ್ಲ. ಮಕ್ಕಳೆಂದರೆ ಕ್ರಿಸ್ತನಿಗೆ ಬಲು ಪ್ರೀತಿ. ಒಮ್ಮೆ ಶಿಷ್ಯ ಕೇಳಿದ " ನೀವು ಯಾವಾಗಲೂ ದೇವರ ರಾಜ್ಯದ ಬಗ್ಗೆ ಮಾತಾನಾಡುತ್ತೀರಿ. ಈ ರಾಜ್ಯದಲ್ಲಿ ಪ್ರವೇಶ ದೊರೆಯುವುದಾದರೂ ಯಾರಿಗೆ?" ಹತ್ತಿರ ಒಬ್ಬ ಹುಡುಗ ನಿಂತಿದ್ದ. ಆತನನ್ನು ಏಸು ಎತ್ತಿ ಮೇಲೆ ನಿಲ್ಲಿಸಿದ " ಈ ಹುಡುಗನ ಹಾಗೆ ಇರುವವರಿಗೆಲ್ಲ ಅಲ್ಲಿ ಪ್ರವೇಶ" ಎಂದ. ಯೇಸುವಿನ ಮಾತು ಸತ್ಯ . ಒಮ್ಮೆ ರಾಮದಾಸಸ್ವಾಮಿ ಮಕ್ಕಳೊಂದಿಗೆ ಆಡುತ್ತಿದ್ದರು. ಅದನ್ನು ಕಂಡ ಕೆಲವು ಸಭ್ಯರಿಗೆ ಆಶ್ಚರ್ಯವಾಯಿತು. " ಏನು ಸ್ವಾಮಿ, ಇದು ನೀವು ನಡೆಸಿರೋದು" ಎಂದು ಒಬ್ಬ ಕೇಳಿದ. ಅದಕ್ಕೆ ಸಮರ್ಥರೆಂದರು:

ವಯಸಿನಾಗ ಪೋರ ಆದರೆ ಅದಾನವ ಹಿರಿಯ
ವಯಸಿನಾಗ ಹಿರಿಯ ಆದರೆ ಆಗ್ಯಾನವ ಕಳ್ಳ


ವಯಸ್ಸು ಹೆಚ್ಚಿದ ಹಾಗೆ ಕೊಂಬು ಮೂಡುತ್ತದೆ. ಆಗ ದೇವರ ನೆನಪು ಆಗದು. ವಿಕ್ಕ ಮಗುವಿನ ಮನದ ಮೇಲೆ ಲೇಪವಿರುವುದಿಲ್ಲ. ಅವನ ಬುದ್ಧಿ ಸ್ವಚ್ಛವಾಗಿರುತ್ತದೆ. 'ಸುಳ್ಳು ಹೇಳಬಾರದು' ಎಂದು ಮಗುವಿಗೆ ಬೋಧಿಸುತ್ತಾರೆ. ಸುಳ್ಳು

ಹೇಳುವುದೆಂದರೇನು? ಎಂತ ಆತ ಕೇಳುತ್ತಾನೆ. ಆಗ ಇದ್ದುದನ್ನು ಇದ್ದಂತೆ ಹೇಳಬೇಕು ಎಂಬ ಸಿದ್ಧಾಂತವನ್ನು ಅವರಿಗೆ ತಿಳಿಸುತ್ತಾರೆ. ಆ ಮಗುವಿನ ಪೀಕಲಾಟ, ಇದ್ದುದನ್ನು ಇದ್ದಂತೆ ಹೇಳುವುದಲ್ಲದೆ ಬೇರೆ ಇನ್ನೊಂದು ರೀತಿಯೂ ಇರುವುದುಂಟೆ? ಇಲ್ಲದುದನ್ನು ಹೇಳುವುದು ಹೇಗೆ? ಚೌಕವನ್ನು ಚೌಕ ಎನ್ನಬೇಕು, ವರ್ತುಲವೆಂದು ಅನ್ನಕೂಡದು– ಎಂದ ಹಾಗೆ ಇದು. ಆ ಮಗುವಿಗೆ ಆಶ್ಚರ್ಯವಾಗುತ್ತದೆ. ಮಕ್ಕಳೆಂದರೆ ಶುದ್ಧ ಪರಮಾತ್ಮನ ಮೂರ್ತಿಗಳಿದ್ದ ಹಾಗೆ. ಅವರಿಗೆ ಹಿರಿಯರು ಸುಳ್ಳು ಶಿಕ್ಷಣ ಕೊಡುತ್ತಾರೆ. ಇರಲಿ, ತಾಯಿ, ತಂದೆ, ಗುರು, ಶರಣರು, ಮಕ್ಕಳು ಈ ರೂಪದಲ್ಲಿ ನಾವು ದೇವರನ್ನು ಕಾಣದಿದ್ದರೆ ಇನ್ನಾವ ರೂಪದಲ್ಲಿ ಕಂಡೇವು? ಇವಕ್ಕಿಂತ ಉತ್ಕೃಷ್ಟ ರೂಪ ಪರಮಾತ್ಮನಿಗೆ ಬೇರೆ ಇಲ್ಲ. ಆತನ ಈ ಸದಾ ಸೌಮ್ಯ ರೂಪಗಳನ್ನು ಮೊದಲು ಗುರುತಿಸಬೇಕು.

ಉಷಾ

ಆ ಉಷಾ! ಸುರ್ಯೋದಯಕ್ಕೆ ಮೊದಲಿನ ಆ ದಿವ್ಯ ಪ್ರಭೆ. ಆ ಉಷಾದೇವಿಯ ಕುರಿತು ಹಾಡು ಹೇಳುವಾಗ ಋಷಿಗಳು ನರ್ತಿಸುತ್ತಿದ್ದರು. " ಓ ಉಷಾ! ಪರಮಾತ್ಮನ ಸಂದೇಶದೊಂದಿಗೆ ಬರುವ ದಿವ್ಯದೂತಿ, ನೀನು ಮಂಜಿನ ಮಣಿಗಳಲ್ಲಿ ಮಿಂದು ಬಂದವಳು. ಅಮೃತತ್ವದ ಬಾವುಟ ನೀನು" ಎಂದ ಋಷಿಗಳು ಭವ್ಯವಾಗಿ, ಹೃದಯಂಗಮವಾಗಿ ವರ್ಣಿಸಿದ್ದಾರೆ. "ಪರಮೇಶ್ವರನ ಸಂದೇಶ ಹೊತ್ತು ಬರುವ ನಿನ್ನನ್ನು ನೋಡಿ ಆತನನ್ನು ನಾನು ಗುರುತಿಸದಿದ್ದರೆ ಇನ್ನಾರು ಆತನನ್ನು ನನಗೆ ತೋರಿಸುವವರು" ಎಂದು ವೈದೀಕ ಋಷಿ. ಎಂಥ ಚಲುವಿನ ರೂಪದಿಂದ ನರ್ತಿಸುತ್ತಾ ಬಂದುನಿಲ್ಲುತ್ತಾಳೆ ಉಷೆ! ನಮ್ಮ ದೃಷ್ಟಿ ಅತ್ತ ಹೊರಳಿದರೆ ತಾನೆ?

ಸೂರ್ಯ



ಹಾಗೆಯೇ ಆ ಸೂರ್ಯ ಆತನ ದರ್ಶನ ಎಂದರೆ ಪರಮಾತ್ಮನ ದರ್ಶನ. ಆತ ಆಕಾಶದಲ್ಲಿ ಬಗೆಬಗೆಯ ಚಿತ್ರ ಬರೆಯುತ್ತಾನೆ. ಬೆಳಗ್ಗೆ ಎದ್ದು ನೋಡಬೇಕು ಆತನ ಆ ಕಲೆಯನ್ನು. ಆ ದಿವ್ಯ ಕಲೆಗೆ, ಆ ಅನಂತ ಸೌಂದರ್ಯಕ್ಕೆ ಉಪಮೆಕೊಡಲು ಸಾಧ್ಯವೆ? ಆದರೆ ಯಾರು ನೋಡುತ್ತಾರೆ? ಅಲ್ಲಿ ಆ ಸುಂದರ ಭಗವಂತ ಬಂದಿದ್ದಾನೆ, ಇಲ್ಲಿ ಈತ ಇನ್ನೂ ಹಾಗೇ ಹೊದೆದುಕೊಂಡು ಮಗಲುತ್ತಾನೆ! ಸೋಮಾರಿ ಮಲಗಬೇಕು ಎನ್ನುತ್ತೀಯಲ್ಲವಪಿ? ನಿನ್ನನ್ನೆಬ್ಬಿಸದೆ ನಾ ಬಿಡುವುದಿಲ್ಲ" ಎನ್ನುತ್ತಾನೆ ಸೂರ್ಯ. ತನ್ನ ಬೆಚ್ಚನೆಯ ಕಿರಣಗಳನ್ನು ತೋರಿಸಿ ಆ ಸೋಮಾರಿಯನ್ನೆಚ್ಚರಿಸುತ್ತಾನೆ.

"ಸೂರ್ಯ ಆತ್ಮ ಜಗತಸ್ತಸ್ಥುಷಶ್ಚ"

ಸೂರ್ಯನು ಸ್ಥಾವರ ಜಂಗಮಕ್ಕೆಲ್ಲ ಆತ್ಮ, ಆಧಾರ. ಋಷಿಗಳು ಆತನನ್ನು 'ಮಿತ್ರ' ಎಂದು ಕರೆದಿದ್ದಾರೆ.

"ಮಿತ್ರೋ ಜವಾನ್ ಯಾತಯತಿ ಬ್ರುವಾಣೋ
ಮಿತ್ರೋ ದಾಧಾರ ಪೃಥಿವಿಮುತದ್ಯಾಮ್"

"ಈ ಗೆಳೆಯ ಜನಪದವನ್ನೆಬ್ಬಿಸುತ್ತಾನೆ. ಕೆಲಸಕ್ಕೆ ತೊಡಗಿಸುತ್ತಾನೆ. ಸ್ವರ್ಗ ಪೃಥ್ವಿಗಳನ್ನಾತ ಧಾರಣೆ ಮಾಡುತ್ತಾನೆ. ನಿಜವಾಗಿಯೂ ಆ ಸೂರ್ಯ ಬಾಳಿನ ಆಧಾರವಾಗಿದ್ದಾನೆ. ಆತನಲ್ಲಿ ದೇವರನ್ನು ನೋಡಿ.

ಗಂಗೆ

"ಪಾವನೆಯಾದ ಆ ಗಂಗೆ! ನಾನು ಕಾಶಿಯಲ್ಲಿದ್ದಾಗ ಗಂಗಾ ತೀರದಲ್ಲಿ ಕೂಡುತ್ತಿದ್ದೆ. ಆ ರಾತ್ರಿ ಏಕಾಂತವಾಗಿ ಹೋಗುತ್ತಿದ್ದೆ. ಆ ಪ್ರವಾಹ ಎಷ್ಟು ಸುಂದರ ! ಎಷ್ಟು ಪ್ರಶಾಂತ ! ಗಂಗಾ ನದಿಯ ಆ ಭವ್ಯ ಗಂಭೀರ ಪ್ರವಾಹ, ಅದರ ಕನ್ನಡಿಯ ಮೇಲೆ ಮೂಡಿದ ಅನಂತ ತಾರೆ! ನಾನು ಮೂಕನಾಗುತ್ತಿದ್ದೆ, ಶಂಕರನ ಜಡೆಯಿಂದ ಅಂದರೆ ಹಿಮಾಚಲದಿಂದ ಹರಿದುಬರುವ ಆ ಗಂಗೆ ! ರಾಜರು ರಾಜ್ಯಗಳನ್ನು ತೃಣವತ್ತಾಗಿ ಭಾವಿಸಿ ಬಿಸುಟು ಅವಳ ತೀರದಲ್ಲಿ ತಪಸ್ಸು ಮಾಡಲು ಬರುತ್ತಿದ್ದರು. ಅಂಥ ಆ ಗಂಗೆಯನ್ನು ಕಂಡು ನನಗೆ ಗಾಢ ಶಾಂತಿ ದೊರೆಯುತ್ತಿತ್ತು. ಅದನ್ನು ನಾನು ವರ್ಣಿಸಲಾರೆ, ಅಲ್ಲಿಗೆ ಮಾತೇ ಮುಗಿಯುತ್ತದೆ. ಸತ್ತ ಬಳಿಕ ತನ್ನ ಮೂಳೆಯಾದರೂ ಗಂಗೆಯಲ್ಲಿ ಬೀಳಲೆಂದು ಹಿಂದೂ ಮನುಷ್ಯ ಆಶಿಸುವುದರ ಕಾರಣ ನನಗಾಗ ತಿಳಿಯಿತು. ನೀವು ನಗಬಹುದು. ಅದರಿಂದೇನು ಕೆಡುವುದಿಲ್ಲ. ನನಗೆ ಮಾತ್ರ ಈ ಭಾವನೆಗಳು ತುಂಬಾ ಪವಿತ್ರವಾಗಿಯೂ, ಸಂಗ್ರಹಣೀಯವಾಗಿಯೂ ತೋರುತ್ತವೆ. ಸಾಯುವಾಗ ಗಂಗಾಜಲದ ಎರಡು ಹನಿಯನ್ನು ಬಾಯಿಗೆ ಬಿಡುತ್ತಾರೆ. ಆ ಹನಿಗಳ ಮೂಲಕ ಪರಮಾತ್ಮನೇ ಮುಖದಲ್ಲಿ ಅವತೀರ್ಣನಾಗುತ್ತಾನೆ. ಆ ಗಂಗೆಯಂದರೆ ಪರಮಾತ್ಮ. ಅವನ ಕರುಣೆಯಾಗಿ ಹರಿದವಳು. ನಿಮ್ಮ ಹೊರಗಿನ ಕೊಳೆಯನ್ನೆಲ್ಲ ತೊಳೆದ ತಾಯಿ. ಗಂಗೆಯಲ್ಲಿ ಪರಮಾತ್ಮ ಪ್ರಕಟವಾದುದು ಕಾಣಿಸದಿದ್ದರೆ ಇನ್ನೆಲ್ಲಿ ಕಾಣಿಸಬಹುದು? ಸೂರ್ಯ ನದಿಗಳು ಏರಿ ಇಳಿಯುವ ಆ ಅನಂತ ಸಮುದ್ರ ಎಲ್ಲವೂ ಪರಮಾತ್ಮನ ಮೂರ್ತಿಗಳೇ.

ಗಾಳಿ

ಆ ಗಾಳಿ ಬರುವುದೆಲ್ಲಿಂದ, ಹೋಗುವುದೆಲ್ಲಿಗೆ ಯಾರಿಗೂ ತಿಳಿಯದು.

ಭಗವಂತನ ದೂತ ಅದು. ಭಾರತದಲ್ಲಿನ ಕೆಲವು ಗಾಳಿ ಮೇಲಿನ ಸ್ಥಿರ ಹಿಮಾಲಯದಿಂದ ಬಂದರೆ ಇನ್ನು ಕೆಲವು ಗಂಭೀರ ಸಾಗರದಿಂದ ಬರುತ್ತವೆ. ಈ ಪವಿತ್ರ ಗಾಳಿ ನಮ್ಮ ಎದೆಯನ್ನು ಸ್ಪರ್ಶಿಸುತ್ತವೆ. ನಮ್ಮನ್ನು ಜಾಗೃತಗೊಳಿಸುತ್ತವೆ. ನಮ್ಮ ಕಿವಿಯಲ್ಲಿ ಗುಣಿಸುತ್ತವೆ. ಅವುಗಳ ಸಂದೇಶವನ್ನಾರು ಕೇಳಬೇಕು? ನಮಗೆ ಬಂದ ನಾಲ್ಕು ಸಾಲಿನ ಪತ್ರಗಳನ್ನು ಸೆರೆಮನೆಯಾಧಿಕಾರಿ ನಮಗೆ ಮುಟ್ಟಿಸದಿದ್ದರೆ ಹುಳ್ಳಗಾಗುತ್ತವೆ. " ಎಲೋ ಹತಭಾಗ್ಯ, ಏನುಂಟು ಆ ಚೀಟಿಯಲ್ಲಿ? ಪರಮೇಶ್ವರನ ಅನಂತ ಸಂದೇಶಗಳು ಕ್ಷಣಕ್ಷಣಕ್ಕೂ ಗಾಳಿಯಲ್ಲಿ ಬರುತ್ತಿವೆಯಲ್ಲ ಅವುಗಳಿಗೆ ಕಿವಿಗೊಡು!"

ಹಸು



ನಮ್ಮ ಕೆಲಸ ಕಾರ್ಯಗಳನ್ನು ಮಾಡುವ ಈ ದನ, ಈ ಹಸು ಎಷ್ಟು ವತ್ಸಲ, ಎಷ್ಟು ಪ್ರೇಮಲ! ಎರಡು ಮೂರು ಮೈಲಿದೂರದ ಕಾಡಿನಿಂದ ಓಡಿಬರುತ್ತವೆ ಕರುವಿಗಾಗಿ. ಗುಡ್ಡ ಬೆಟ್ಟಗಳಿಂದ ಸ್ವಚ್ಛವಾದ ನೀರನ್ನು ಹೊತ್ತು ಧೋಧೋ ಎಂದು ಹರಿಯುತ್ತ ಬರುವ ನದಿಗಳನ್ನು ಕಂಡಾಗ ವೇದದ ಋಷಿಗಳಿಗೆ, ತುಂಬಿದ ಮೊಲೆಗಳೊಂದಿಗೆ ಕರುವಿಗಾಗಿ ಹಾತೊರೆಯುತ್ತಾ ಬರುವ ಹಸುವಿನ ಸ್ಮರಣೆಯಾಗುತ್ತದೆ. ಅವರು ನದಿಯನ್ನು ಕುರಿತು ಹೇಳುತ್ತಾರೆ: " ಹೇ ದೇವಿ, ಹಾಲಿನಂಥ ಪವಿತ್ರ, ಪಾವನ, ಮಧುರ ನೀರನ್ನು ತರುವ ನೀನು ಪ್ರತ್ಯಕ್ಷ ಕಾಮಧೇನು. ಹಸು ಕಾಡಿನಲ್ಲೇ ಇರಲಾರದು. ಹಾಗೇ ನೀನೂ ಬೆಟ್ಟದಲ್ಲಿರಲಾರೆ. ಅಲ್ಲಿಂದ ಜಿಗಿಯುತ್ತಾ ನಿರಾಡಿಸಿದ ಮಕ್ಕಳ ಭೆಟ್ಟಿಗಾಗಿ ನೀನು ಬರುತ್ತೀ"

ವಾಶ್ರಾ ಇವ ಧೇನವಃ ಸ್ಯಂದ ಮಾನಃ

ವತ್ಸಲ ಹಸುವಿನ ರೂಪದಲ್ಲಿ ಭಗವಂತನೇ ನಿಂತಿದಾನೆ ಬಾಗಿಲಲ್ಲಿ.

ಕುದುರೆ

ಇನ್ನು ಆ ಕುದುರೆ – ಎಷ್ಟು ಉತ್ತಮ, ಎಷ್ಟು ಪ್ರಮಾಣಿಕ, ಎಷ್ಟು ಸ್ವಾಮಿನಿಷ್ಠ! ಅರಬ್ಬೀಗಳಿಗೆ ಕುದುರೆಯ ಮೇಲೆ ಅದೆಷ್ಟು ಪ್ರೀತಿ! ಆ ಅರಬ್ಬಿಯವನ ಕತೆ ಗೊತ್ತಿಲ್ಲವೆ ನಿಮಗೆ? ತೊಂದರೆಗೊಳಗಾದ ಆ ಅರಬ್ಬಿಯವನು ತನ್ನ ಕುದುರೆಯನ್ನು ಸೋದಾಗರನಿಗೆ ಮಾರಲು ಸಿದ್ಧನಾಗುತ್ತಾನೆ. ಕೈಯಲ್ಲಿ ಚೀಲ ಹಿಡಿದುಕೊಂಡು ಅದರ ಹತ್ತಿರ ಹೋಗುತ್ತಾನೆ. ಕುದುರೆಯ ಗಂಭೀರ, ಪ್ರೇಮಲ



ಕಣ್ಣಿನ ಕಡೆ ಅವನ ದೃಷ್ಟಿ ಹೊರಳುತ್ತದೆ. ಅವನ ಹೃದಯ ತುಂಬಿಬರುತ್ತದೆ. 'ಪ್ರಾಣ ಹೋದರೂ ಚಿಂತೆಯಿಲ್ಲ' ಈ ಕುದುರೆಯನ್ನು ನಾನು ಮಾರಲಾರೆ. ಆಗುವುದೆಲ್ಲ ಆದೀತು. ಹೊಟ್ಟೆಗೆ ಸಿಗದಿದ್ದರೂ ಸರಿಯೆ, ದೇವರು ನೋಡಿಕೊಂಡಾನು' ಎನ್ನುತ್ತಾನೆ. ಬೆನ್ನು ಚಪ್ಪರಿಸುತ್ತಲೂ ಹೇಗೆ ಪ್ರೀತಿಯಿಂದ ಫುರುಫುರಿಸುತ್ತದೆ! ಎಷ್ಟು ಚಂದ ಈ ಆಯಾಲ, ನಿಜಕ್ಕೂ ಕುದುರೆಯ ಗುಣ ಅಮೂಲ್ಯ. ಏನಿದೆ ಆ ಸೈಕಲಿನಲ್ಲಿ? ಕುದುರೆಯ ಸೇವೆ ಮಾಡಿದರೆ ನಿಮಗಾಗಿ ಅದು ಪ್ರಾಣವನ್ನಾದರೂ ಕೊಟ್ಟೀತು. ನಿಮ್ಮ ಗೆಳೆಯನಾದೀತು. ನನ್ನ ಗೆಳೆಯನೊಬ್ಬ ಕುದುರೆ ಸವಾರಿ ಕಲಿಯುತ್ತಿದ್ದ. ಅದು ಅವನನ್ನು ಕೆಡಹುತ್ತಿತ್ತು. ಆತ ನನ್ನ ಹತ್ತಿರ ಬಂದು, 'ಕುದುರೆ ನನ್ನನ್ನು ಬೆನ್ನ ಮೇಲೆ ಏರಗೊಡುವುದಿಲ್ಲವಲ್ಲ' ಎಂದ. ನಾನು, ' ನೀವು ಅದರ ಮೇಲೆ ಬರೀ ಸವಾರಿ ಮಾಡಲು ಹೋಗುತ್ತೀರಿ, ಅದರ ಸೇವೆಯನ್ನೆಂದಾದರೂ ಮಾಡುತ್ತೀರಾ? ಅದಕ್ಕೆ ತಿನಿಸು ಹಾಕಿ, ನೀರು ಕುಡುಸು, ಮೈ ತಿಕ್ಕಿ – ಅನಂತರ ಕುಳಿತುಕೊಳ್ಳಿ' ಎಂದೆ. ಆತ ಹಾಗೆ ಮಾಡತೊಡಗಿದ. ಕೆಲವು ದಿನ ಕಳೆದ ಬಳಿಕ ನನ್ನ ಬಳಿಗೆ ಬಂದು ' ಈಗ ಕುದುರೆ ನನ್ನನ್ನು ಕೆಳಕ್ಕೆ ದೂಡುವುದಿಲ್ಲ' ಎಂದ. ಕುದುರೆ ಎಂದರೆ ಪರಮಾತ್ಮ, ಭಕ್ತನನ್ನಾತ ದೂಡುವನೇ? ಆತನ ಭಕ್ತಿಯನ್ನು ಕಂಡು ಕುದುರೆ ನಮ್ರವಾಯಿತು. ಈತ ಭಕ್ತನೋ ಅಲ್ಲವೋ ಎಂದು ಪರೀಕ್ಷಿಸುತ್ತದೆ. ಕುದುರೆ. ಭಗವಾನ್ ಶ್ರೀಕೃಷ್ಣನೂ ಸಹ ಕುದುರೆಯ ಸೇವೆ ಮಾಡುತ್ತಿದ್ದ. ತನ್ನ ಪೀತಾಂಬರದಲ್ಲಿ ಹುರುಳಿ ಹಾಕಿ ತಿನ್ನಿಸುತ್ತಿದ್ದ. ದಾರಿಯಲ್ಲಿ ಹಳ್ಳ, ತಿಟ್ಟೆ, ಕೆಸರು ಅಡ್ಡ ಬಂದರೆ ಸೈಕಲು ದಾಟಲಾರದು. ಕುದುರೆಯೋ ನೆಗೆಯುತ್ತ ಹೋಗುತ್ತದೆ. ಸುಂದರ ಪ್ರೇಮಲ ಕುದುರೆಯಂದರೆ ಪರಮೇಶ್ವರನ ಮೂರ್ತಿಯೇ.

ಸಿಂಹ



ಇನ್ನು ಸಿಂಹ! ನಾನು ಬಡೋದೆಯಲ್ಲಿದ್ದಾಗ ಬೆಳಗಿನ ಜಾವ ಅದರ ಘರ್ಜನೆಯ ಗಂಭೀರ ಧ್ವನಿ ಕಿವಿ ಸೇರುತ್ತಿತ್ತು. ದೇವಾಲಯದ ಗರ್ಭಗುಡಿಯಲ್ಲಿ ಗುಂಯಿಗೊಡುವ ದನಿಯಂತೆ ಅದರ ಹೃದಯಗರ್ಭದ ಆಳದಿಂದ ಬಂದ ದಿನ. ತತ್‌ಕ್ಷಣ ಹೃದಯ ಕಲಕುತ್ತಿತ್ತು. ಸಿಂಹದ ಆ ಧೀರೋದಾತ್ತ ಗಂಭೀರ ಮುದ್ರೆ! ಅದರ ಆ ರಾಜಠೀವಿ, ರಾಜವೈಭವ! ವನರಾಜನ ಮೇಲೆ ಚವರಿ ಬೀಸಿದ ಹಾಗಿರುವ ಆ ಭವ್ಯ ಸುಂದರ ಕೇಸರ! ಬಡೋದೆಯ ಉಪವನದಲ್ಲಿ ಆ ಸಿಂಹ ಇತ್ತು. ಮುಕ್ತವಾಗಿರಲಿಲ್ಲ. ಪಂಜರದಲ್ಲಿಯೇ ಓಡಿಯಾಡುತ್ತಿತ್ತು.

ಅದರ ಕಣ್ಣುಗಳಲ್ಲಿ ಕ್ರೌರ್ಯದ ಕಳೆ ಕೊಂಚವೂ ಇರಲಿಲ್ಲ. ಆ ಮುಖಮುದ್ರೆಯಲ್ಲಿ, ದೃಷ್ಟಿಯಲ್ಲಿ, ಕಾರುಣ್ಯ ತುಂಬಿರುತ್ತಿತ್ತು. ಲೋಕದ ಪರಿವೆಯೇ ಅದಕ್ಕಿದ್ದ ಹಾಗಿರಲಿಲ್ಲ. ಯಾವಾಗಲೂ ತನ್ನ ಧ್ಯಾನದಲ್ಲೇ. ಪರಮೇಶ್ವರನ ಪಾವನ ಮೂರ್ತಿ ಅದು ಎಂದು ನನಗನಿಸುತ್ತದೆ. ಆಂದ್ರೋಕ್ಲೀಸ್ ಮತ್ತು ಸಿಂಹದ ಕತೆಯನ್ನು ಬಾಲ್ಯದಲ್ಲಿ ನಾನೋದಿದ್ದೆ. ಆ ಕತೆ ಎಷ್ಟು ಸುಂದರ! ಹಸಿದಾಗಲೂ ಸಹ ಆ ಸಿಂಹ ಆಂದ್ರೋಕ್ಲೀಸನ ಉಪಕಾರ ವನ್ನು ನೆನೆದು ಅವನ ಗೆಳೆಯನಾಗುತ್ತದೆ. ಅವನ ಕಾಲು ನೆಕ್ಕತೊಡಗುತ್ತದೆ. ಇದರ ಅರ್ಥವೇನು? ಸಿಂಹದಲ್ಲಿನ ಪರಮಾತ್ಮನನ್ನು ಆಂದ್ರೋಕ್ಲೀಸ್ ಕಂಡಿದ್ದ. ಶಂಕರನ ಪತ್ತಿರ ಸಿಂಪ ಯಾವಾಗಲೂ ಇರುತ್ತದೆ. ಭಗವಂತನ ದಿವ್ಯ ವಿಭೂತಿ ಸಿಂಹ.

ಹುಲಿ

ಹುಲಿಯ ಚಮತ್ಕಾರವೇನು ಅಲ್ಪವೇ? ಅದರಲ್ಲಿ ಸಹ ಈಶ್ವರನ ತೇಜಸ್ಸು ಪ್ರಕಟವಾಗಿದೆ. ಅದರೊಂದಿಗೆ ಗೆಳೆತನ ಮಾಡುವುದು ಅವಶ್ಯವಲ್ಲ. ಭಗವಾನ್ ಪಾಣಿನಿ ಕಾಡಿನಲ್ಲಿ ಶಿಷ್ಯರಿಗೆ ಪಾಠ ಹೇಳುತ್ತಿದ್ದಾಗ ಹುಲಿ ಬಂತು. ಮಕ್ಕಳಿಗೆ



ಗಾಬರಿಯಾಗಿ, ' ವ್ಯಾಘ್ರಃ ವ್ಯಾಘ್ರಃ' ಎಂದು ಕಾಗಿಕೊಂಡರು. ಪಾಣಿನಿ ' ಹೌದು, ವ್ಯಾಘ್ರ ಎಂದರೇನು? ವ್ಯಾಜಿ ಘ್ರಾತೀತಿ ವ್ಯಾಘ್ರಃ. ಯಾವುದಕ್ಕೆ ಘ್ರಾಣೇಂದ್ರಿಯ ತೀಕ್ಷ್ಣವೋ ಅದು ವ್ಯಾಘ್ರ' ಎಂದರು. ಹುಲಿಯನ್ನು ಕಂಡು ಮಕ್ಕಳಿಗೆ ಹೆದರಿಕೆ. ಭಗವಾನ್ ಪಾಣಿನಿಗೆ ಮಾತ್ರ ಹುಲಿ ನಿರುಪದ್ರವಿಯೂ, ಆನಂದಮಯವೂ ಆದ ಶಬ್ದವಾಗಿತ್ತು. ವ್ಯಾಘ್ರವನ್ನು ವಿವರಿಸತೊಡಗಿದರು. ಹುಲಿ ಅವರನ್ನೇ ತಿಂದುಹಾಕಿತು. ಆದರೇನಂತೆ? ಅದಕ್ಕೆ ಅವರ ದೇಹದ ವಾಸನೆ ಸಿಹಿಯೆನಿಸಿತು. ಸರಿ ತಿಂದುಬಿಟ್ಟಿತು. ಪಾಣಿನಿ ಮಾತ್ರ ಪಲಾಯನ ಮಾಡಲಿಲ್ಲ. ಶಬ್ದಬ್ರಹ್ಮನ ಉಪಾಸಕರು ಅವರು. ಅವರಿಗೆಲ್ಲವೂ ಅದ್ವೈತವೇ. ಹುಲಿಯಲ್ಲೂ ಕೂಡ ಅವರು ಶಬ್ದಬ್ರಹ್ಮದ ಅನುಭವ ಪಡೆದರು. ಅವರು ಈ ಮಹಾತ್ಮಯಿಂದಾಗಿಯೇ ಭಾಷ್ಯಗಳಲ್ಲಿ ಪಾಣಿನಿಯ ಹೆಸರು ಬಂದಾಗಲೆಲ್ಲ ' ಭಗವಾನ್ ಪಾಣಿನಿ' ಎಂಬ ಪೂಜ್ಯ ಭಾವದಿಂದ ಸಂಬೋಧಿಸಲಾಗಿದೆ. ಪಾಣಿನಿಯ ಉಪಕಾರ ದೊಡ್ಡದು ಎಂದಿದ್ದಾರೆ.

ಆಜ್ಞಾನಾಂಧಸ್ಯ ಲೋಕಸ್ಯ ಜ್ಞಾನಾಂಜಲಶಲಾಕಯಾ
ಚಕ್ಷುರುನ್ಮೀಲಿತಂ ಯೇನ ತಸ್ಮೈ ಪಾಣಿನಯೆ ನಮಃ//

ಹೀಗೆ ಭಗವಾನ್ ಪಾಣಿನಿ ಹುಲಿಯಲ್ಲಿ ಪರಮಾತ್ಮನನ್ನು ಕಂಡರು. ಜ್ಞಾನೇಶ್ವರರು ಹೇಳಿದ್ದಾರೆ:

‘ ಘರಾ ಯೇವೋ ಪಾಂಸ್ವರ್ಗ/ ಕಾ ವರಿಪಡೋ ವ್ಯಾರ್ಥ/
ಪರೀ ಆತ್ಮ ಬುದ್ಧೀಸೀ ಭಂಗ/ ಕದಾ ನೋಹೇ//’

ಮಹರ್ಷಿ ಪಾಣಿನಿಯ ಸ್ಥಿತಿ ಹೀಗಿತ್ತು. ಹುಲಿ ದೈವೀ ವಿಭೂತಿಯೆಂಬುದು ಅವರಿಗೆ ತಿಳಿದಿದ್ದು.

ಹಾವು



ಹಾಗೇ ಆ ಹಾವು. ಅದನ್ನು ಕಂಡರೆ ಹೆದರುತ್ತಾರೆ. ಆದರೆ ಹಾವು ಕಟ್ಟಾ ನೈಷ್ಠಿಕ ಬ್ರಾಹ್ಮಣ. ಎಷ್ಟು ಸ್ವಚ್ಛ, ಎಷ್ಟು ಸುಂದರ! ಸ್ವಲ್ಪ ಕೊಳೆಯಿದ್ದರೂ ಅದಕ್ಕಾಗದು. ಕೊಳಕು ಬ್ರಾಹ್ಮಣರೆಷ್ಟೋ ಜನ. ಕೊಳಕು ಹಾವೋ? ಛೆ! ಏಕಾಂತವಾಸಿ ಋಷಿಯಂಥ ಪ್ರಾಣಿ ಇದು. ನಿರ್ಮಲ, ಸತೇಜ, ಮನೋಹರ, ಹಾರದಂತಿರುವ ಈ ಹಾವಿಗೇಕೆ ಹೆದರಬೇಕು? ಅದನ್ನು ಪೂಜಿಸಬೇಕೆಂದು ನಮ್ಮ ಪೂರ್ವಜರು ಹೇಳಿದ್ದಾರೆ. ಹಿಂದೂ ಧರ್ಮದಲ್ಲಿ ಎಂಥೆಂಥ ಹುಚ್ಚು ರೀತಿ ಇವು ಎಂದು ನೀವೆನ್ನಬಹುದು. ನಾಗಪೂಜೆ ಮಾಡಬೇಕೆಂದು ಹೇಳಿದುದು ನಿಜ. ಬಾಲ್ಯದಲ್ಲಿ ನಾನು ಗಂಧದ ಹಾವು ಮಾಡಿ ತಾಯಿಗೆ ಕೊಡುತ್ತಿದ್ದೆ. ‘ ಪೇಟೆಯಲ್ಲಿ ಇನ್ನೂ ಚಲೋದು ಸಿಕ್ಕುತ್ತದಲ್ಲ’ ಎನ್ನುತ್ತಿದ್ದೆ. ತಾಯಿ ‘ ಅದು ಉಪಯೋಗವಿಲ್ಲದ್ದು, ಬೇಡ. ಮಗನ ಕೈಯದೇ ಒಳ್ಳೆಯದು’ ಎನ್ನುತ್ತಿದ್ದಳು. ಅನಂತರ ಆ ಹಾವಿನ ಪೂಜೆ. ಇದೇನು ಹುಚ್ಚು? ಕೊಂಚ ವಿಚಾರ ಮಾಡಿ ನೋಡಿ. ಶ್ರಾವಣ ಮಾಸದಲ್ಲಿ ಆ ಹಾವು ಅತಿಥಿಯಾಗಿ ನಮ್ಮ ಮನೆಗೆ ಬರುತ್ತದೆ. ಮಳೆಯ ನೀರಿನಿಂದ ಆ ಬಡಪಾಯಿಯ ಮನೆ ತುಂಬಿ ಹೋಗುತ್ತದೆ. ಇನ್ನೇನು ಮಾಡಬೇಕು ಅದು? ದೂರ ಏಕಾಂತದಲ್ಲಿರುವ ಆ ಋಷಿ ನಿಮಗೆ ಸುಮ್ಮನೆ ಹೆಚ್ಚು ತೊಂದರೆಕೊಡಬಾರದೆಂದು ಕಟ್ಟಿಗೆಗಳ ಮಧ್ಯೆ ಬಿದ್ದುಕೊಂಡಿರುತ್ತದೆ. ಸಾಧ್ಯವಿದ್ದಷ್ಟು ಕಡಮೆ ಸ್ಥಳವನ್ನೇ ವ್ಯಾಪಿಸಿಕೊಳ್ಳುತ್ತದೆ. ಆದರೂ ನಾವು ದೊಣ್ಣೆ ಎತ್ತಿಕೊಂಡು ಧಾವಿಸುತ್ತೇವೆ. ಸಂಕಟಕ್ಕೊಳಗಾದ ಅತಿಥಿ ಮನೆಗೆ ಬಂದಾಗ ಅವನನ್ನು ಹೊಡೆಯಬೇಕೇ ನಾವು? ಸೆಯಿಂಟ್ ಫ್ರಾನ್ಸಿಸ್ ಬಗ್ಗೆ ಒಂದು ಕತೆಯಿದೆ. ಕಾಡಿನಲ್ಲಿ ಹಾವುಗಳನ್ನು ನೋಡುತ್ತಲೂ ಆತ ‘ತಮ್ಮ ಬನ್ನಿ’ ಎಂದು ಪ್ರೀತಿಯಿಂದ ಕರೆಯುತ್ತಿದ್ದ. ಆ ಹಾವುಗಳು ಬಂದು ಅವನ ತೊಡೆಯ ಮೇಲೆ ಆಡುತ್ತಿದ್ದವು. ಮೈಮೇಲೆ ಏರಿ ನಲಿದಾಡುತ್ತಿದ್ದವು. ಇದು ಸುಳ್ಳು ಎನ್ನಬೇಡಿ, ಪ್ರೀತಿಯಲ್ಲಿ ಅಂಥ ಶಕ್ತಿಯುಂಟು. ಹಾವಿನಲ್ಲಿ ವಿಷವಿದೆ. ಮನುಷ್ಯನಲ್ಲಿ ವಿಷವಿಲ್ಲವೇ? ಹಾವು ಕಚ್ಚಿದರೂ ಕ್ವಚಿತ್ತಾಗಿ. ಬೇಕಂತಲೇ ಅದು ಕಚ್ಚುವುದಿಲ್ಲ. ನೂರರಲ್ಲಿ ತೊಂಬತ್ತು ಹಾವುಗಳಿಗೆ ವಿಷವಿಲ್ಲ.

ನಿಮ್ಮ ಹೊಲವನ್ನು ಅದು ಕಾಯುತ್ತದೆ. ಬೆಳೆಯನ್ನು ನಾಶಗೊಳಿಸುವ ಅಸಂಖ್ಯ ಹುಳು ಹುಪ್ಪಡಿಗಳನ್ನು ತಿಂದು ಅದು ಬದುಕುತ್ತದೆ. ಹಾವಿಲ್ಲದಿದ್ದಲ್ಲಿ ಬೆಳೆಯ ರಕ್ಷಣೆ ಅಸಾಧ್ಯ. ಪರೋಪಕಾರಿ, ಶುದ್ಧ, ತೇಜಸ್ವಿ, ಏಕಾಂತಪ್ರಿಯ ಆದ ಈ ಹಾವು ಭಗವತ್ ಸ್ವರೂಪಿ. ನಮ್ಮ ದೇವತೆಗಳಲ್ಲೆಲ್ಲ ಒಂದಿಲ್ಲೊಂದು ಕಡೆ ಹಾವು ಇದ್ದೇ ಇದೆ. ಗಣಪತಿಯ ಸೊಂಟಕ್ಕೆ ಹಾವು, ಶಂಕರನ ಕೊರಳಿಗೆ ಹಾವು, ಭಗವಾನ್ ವಿಷ್ಣುವಿಗಂತೂ ಹಾವೇ ಹಾಸುಗೆ. ಹಾವಿನಲ್ಲಿ ಭಗವಂತನ ಮೂರ್ತಿ ಪ್ರಕಟವಾಗಿರುವುದೇ ಈ ಎಲ್ಲದರ ಭಾವಾರ್ಥ. ಹಾವಿನಲ್ಲಿ ಆ ಪರಮೇಶ್ವರನ ಪರಿಚಯ ಮಾಡಿಕೊಳ್ಳಿ.


ವಾನರ



ಇಂಥ ಉದಾಹರಣೆ ಎಷ್ಟು ಹೇಳಲಿ? ನಾನು ಕೊಟ್ಟಿರುವುದು ಬರೀ ಕಲ್ಪನೆ. ರಾಮಾಯಣದ ಸಾರಸರ್ವಸ್ವ ಈ ಬಗೆಯ ರಮಣೀಯ ಕಲ್ಪನೆಗಳಲ್ಲಿದೆಯಂದು ನನ್ನ ಅಭಿಪ್ರಾಯ. ಅಲ್ಲಿ ತಂದೆ–ಮಕ್ಕಳ ಪ್ರೀತಿ, ತಾಯಿ–ಮಕ್ಕಳ ಪ್ರೀತಿ, ಅಣ್ಣ ತಮ್ಮಂದಿರ ಪ್ರೀತಿ, ಪತಿ ಪತ್ನಿಯರ ಪ್ರೀತಿ ಎಲ್ಲಾ ಇದೆ. ಇದಕ್ಕಾಗಿ ರಾಮಾಯಣ ನನಗೆ ಪ್ರಿಯವೆನಿಸದು. ರಾಮನಿಗೂ, ವಾನರರಿಗೂ ಸಖ್ಯ ಬೆಳೆಯಿತಲ್ಲ ಅದಕ್ಕಾಗಿ ರಾಮಾಯಣ ಅಂದರೆ ನನಗೆ ಪ್ರೀತಿ. ವಾನರರು ನಾಗಜನ ಎಂದು ಈಚೆ ಹೇಳುತ್ತಾರೆ. ಹಳೆಯದನ್ನು ತೋಡುವುದು ಇತಿಹಾಸಜ್ಞರ ಕೆಲಸ. ಆ ಬಗ್ಗೆ ನಾನು ದೂರಲಾರೆ. ಆದರೆ ನಿಜಕ್ಕೂ ರಾಮ ವಾನರರೊಂದಿಗೆ ಸಖ್ಯ ಬೆಳೆಸಿದುದರಲ್ಲಿ ಅವಶ್ಯವೇನಿದೆ? ರಾಮನು ವಾನರರಲ್ಲಿ ಸ್ನೇಹ ಬೆಳೆಸಿದುದರಲ್ಲೇ ರಾಮನ ರಾಮತ್ವ, ರಮಣೀಯತ್ವ. ಹಾಗೇ ಹಸುಗಳೊಂದಿಗೆ ಕೃಷ್ಣನ ಸಂಬಂಧ. ಕೃಷ್ಣಪೂಜೆಯಲ್ಲ ಅದೇ ಆಧಾರದ ಮೇಲೆ ನಿಂತಿದೆ. ಶ್ರೀ ಕೃಷ್ಣನ ಚಿತ್ರ ಎಂದರೆ ಅವನ ಸುತ್ತಮುತ್ತ ಹಸುಗಳಿದ್ದೇ ತೀರಬೇಕು. ಗೋಪಾಲಕೃಷ್ಣ! ಗೋಪಾಲಕೃಷ್ಣ! ಕೃಷ್ಣನಿಂದ ಹಸುಗಳನ್ನು ಬೇರ್ಪಡಿಸಿದರೆ ಅವನಲ್ಲಿ ಉಳಿಯುವುದೇನು? ರಾಮನಿಂದ ವಾನರರನ್ನು ದೂರ ಮಾಡಿದರೆ ರಾಮನೇನು ಉಳಿದ? ವಾನರರಲ್ಲಿ ಸಹ ರಾಮನು ಪರಮಾತ್ಮನನ್ನು ಕಂಡ. ಅವರೊಂದಿಗೆ ಪ್ರೀತಿಯ, ಆತ್ಮೀಯತೆಯ ಸಂಬಂಧ ಬೆಳೆಸಿದ. ರಾಮಾಯಣದ ಬೀಗದ ಕೈ ಇದು. ಇದಿಲ್ಲವಾದರೆ ಸವಿಯೇ ಇಲ್ಲ. ತಂದೆ – ಮಗನ, ತಾಯಿ – ಮಕ್ಕಳ ಸಂಬಂಧ ಬೇರೆಡೆಗೂ ಸಿಕ್ಕೀತು. ಆದರೆ ನರ ವಾನರರ ಮಧುರ ಮೈತ್ರಿಯನ್ನು

ರಾಮಾಯಣ ತೋರಿಸಿತು. ಬೇರೆಲ್ಲೂ ಇಲ್ಲ. ವಾನರರೊಳಗಿನ ದೇವರನ್ನು ಅರಗಿಸಿಕೊಂಡಿತು. ವಾನರರನ್ನು ಕಂಡು ಋಷಿಗಳಿಗೆ ಕೌತುಕವಾಗುತ್ತಿತ್ತು. ನೆಲದಮೇಲೆ ಕಾಲಿಡದೆ ಗಿಡಗಳ ಮೇಲೆ ಹಾರುತ್ತ ತಿರುಗುವ ಆ ಕೋತಿಗಳನ್ನು ಕಂದು ಋಷಿಗಳಿಗೆ ಕಾವ್ಯಸ್ಫೂರ್ತಿಯುಂಟಾಗುತ್ತಿತ್ತು. ಬ್ರಹ್ಮನ ಕಣ್ಣು ಕೋತಿಯ ಕಣ್ಣಿನಂತೆ ಇರುವುದೆಂದು ಉಪನಿಷತ್ತಿನಲ್ಲಿ ಹೇಳಿದೆ. ವಾನರರ ನೇತ್ರ ಚಂಚಲ. ನಾಲ್ಕೂ ಕಡೆಗೂ ಅದರ ದೃಷ್ಟಿ. ಬ್ರಹ್ಮನಿಗೂ ಅಂಥ ಕಣ್ಣೇ ಬೇಕು. ಈಶ್ವರನ ಕಣ್ಣು ಸ್ಥಿರವಾಗಿದ್ದರೆ ಪ್ರಯೋಜನವಿಲ್ಲ. ನಾವು ನೀವು ಧ್ಯಾನಸ್ಥರಾಗಿ ಕೂಡಬಹುದು. ಈಶ್ವರ ಧ್ಯಾನಸ್ಥನಾದರೆ ಸೃಷ್ಟಿಯ ಗತಿಯೇನು? ಎಲ್ಲರ ಯೋಗಕ್ಷೇಮವನ್ನೂ ನೋಡುವ ಬ್ರಹ್ಮನ ಕಣ್ಣು ವಾನರರಲ್ಲಿ ಕಾಣಿಸಿದವು ಋಷಿಗಳಿಗೆ. ಕೋತಿಗಳಲ್ಲೂ ದೇವರನ್ನು ಕಾಣಲು ಕಲಿಯಿರಿ.

ನವಿಲು



ಇನ್ನು ಆ ನವಿಲು? ಇಲ್ಲಿ ನವಿಲು ಹೆಚ್ಚಾಗಿಲ್ಲ. ಗುಜರಾತಿನಲ್ಲಿ ಹೆಚ್ಚು. ನಾನು ಗುಜರಾತಿನಲ್ಲಿದ್ದೆ. ನಿತ್ಯವೂ ಹತ್ತು ಹನ್ನೆರಡು ಮೈಲು ಅಲೆಯುವ ಚಟ ನನ್ನದು. ಹೀಗೆ ಅಲೆಯುವಾಗ ಆಗಾಗ ನವಿಲನ್ನು ನೋಡುತ್ತಿದ್ದೆ. ಆಕಾಶದಲ್ಲಿ ಮೋಡ ಕವಿದಿರಬೇಕು, ಮಳೆ ಬೀಳುವ ಹಾಗಿರಬೇಕು, ಮುಗಿಲಿಗೆ ಗಾಢವಾದ ಕಪ್ಪು ಬಣ್ಣ ಏರಿರಬೇಕು, ಆಗ ನವಿಲು ದನಿಯೆತ್ತುತ್ತದೆ. ಹೃದಯ ಕಲಮಲಗೊಂಡು ಎದ್ದ ಆ ಕೇಕೆಯನ್ನು ಕೇಳಿ; ತಿಳಿದೀತು. ನವಿಲಿನ ಆ ಸ್ವರವೆಂದರೆ 'ಷಡ್‌ಜಂರೌತಿ'. ಈ ಮೊದಲನೆ ಷಡ್ಜ ಹೇಳಿದುದು ನವಿಲು ಅನಂತರ ಹೆಚ್ಚು ಕಡಮೆ ಪ್ರಮಾಣದಲ್ಲಿ ನಾವು ಇತರ ಸ್ವರಗಳನ್ನು ಹೊಂದಿಸಿದೆವು. ಮೋಡಗಳ ಕಡೆಗಿರುವ ಅದರ ದೃಷ್ಟಿ, ಆಳವಾದ ಆ ಸ್ವರ, ಗಡ ಗಡ ಧಿಮಿ ಧಿಮಿ ಎಂದು ಮೇಘಗರ್ಜನೆ ಮೊದಲಾಗುತ್ತಲೂ ಎದ್ದು ನಿಲ್ಲುವ ಅದರ ಚವರಿ! ಎಲೆಲಾ! ಆ ಚವರಿಯ ಮುಂದೆ ಮಾನವನ ಠೀವಿಯೆಲ್ಲವೂ ಕಳಾಹೀನ. ಬಾದಷಹ ಸಿಂಗರಿಸಿಕೊಳ್ಳುತ್ತಾನೆ. ಆ ಚವರಿಯ ಮುಂದೆ ಅವನ ಅಲಂಕಾರವೇ? ಎಂಥ ಭವ್ಯ ಪಿಂಛ, ಆ ಸಾವಿರ ಕಣ್ಣು, ಆ ಬಗೆಬಗೆಯ ಬಣ್ಣ, ಆ ಅನಂತ ಛಾಯೆ, ಅದ್ಭುತ ಸುಂದರ ಮೃದು ರಮಣೀಯ ರಚನೆ ನೋಡಿ. ಆ ಚವರಿಯನ್ನು ನೋಡಿ, ಅಲ್ಲಿರುವ ಪರಮಾತ್ಮನನ್ನು ಗುರುತಿಸಿ. ಈ ಎಲ್ಲ ಸೃಷ್ಟಿಯೂ ಹೀಗೆ ಅಲಂಕೃತವಾಗಿದೆ. ಎಲ್ಲೆಲ್ಲೂ ಪರಮಾತ್ಮ ದರ್ಶನ ಕೊಡುತ್ತಾ ನಿಂತಿದ್ದಾನೆ. ನೋಡಲಾರದ ನಿರ್ಭಾಗ್ಯರು ನಾವು. ತುಕಾರಾಮ್ ಹೇಳಿದ್ದಾರೆ,

ಶರಣರಿಗೆ ಸರ್ವತ್ರ ಸುಭಿಕ್ಷ/
ನಿರಭಾಗ್ಯರ್ಗೆಲ್ಲೆಡೆಯೂ ದುರ್ಭಿಕ್ಷ//

ಶರಣರಿಗೆ ಎಲ್ಲೆಲ್ಲೂ ಸುಫಲ. ನಿರ್ಭಾಗ್ಯರಾದ ನಮಗೆ ಮಾತ್ರ ಎಲ್ಲೆಲ್ಲೂ ಬರಗಾಲ.

ಅಗ್ನಿ

ವೇದದಲ್ಲಿ ಅಗ್ನಿಯ ಉಪಾಸನೆಯ ವಿಚಾರವಿದೆ. ಅಗ್ನಿಯೂ ನಾರಾಯಣ, ಎಂಥ ದೇದೀಪ್ಯಮಾನ ಮೂರ್ತಿ ಅದು! ಎರಡು ಕಟ್ಟಿಗೆ ಉಜ್ಜಿದರೆ ತತ್‌ಕ್ಷಣ ಪ್ರಕಟವಾಗುತ್ತಾನೆ. ಅದಕ್ಕೆ ಮೊದಲು ಎಲ್ಲಿ ಅವಿತುಕೊಂಡಿದ್ದನೋ ಯಾರು ಬಲ್ಲರು? ಎಷ್ಟು ಬಿಸಿ ಎಷ್ಟು ತೇಜಸ್ಸು! ವೇದಗಳ ಮೊದಲನೆ ದನಿ ಹೊರಟುದು ಅಗ್ನಿಯ ಉಪಾಸನೆಯಿಂದ.



ಅಗ್ನಿಮೀಳೇ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಂ/
ಹೋತಾರಂ ರತ್ನಧಾತಮಂ//

ಯಾವ ಅಗ್ನಿಯ ಉಪಾಸನೆಯಿಂದ ವೇದಗಳು ಮೊದಲಾದವೋ, ಆ ಅಗ್ನಿಯ ಕಡೆ ನೋಡಿ. ಆತನ ಆ ಜ್ವಾಲೆಗಳನ್ನು ನೋಡಿದಾಗ ನನಗೆ ಜೀವಾತ್ಮನ ಖಟಿಪಿಟಿ ನೆನಪಾಗುತ್ತದೆ. ಆ ಜ್ವಾಲೆ ಮನೆಯಲ್ಲಿನ ಒಲೆಯದಾದರೂ ಸರಿ, ಕಾಡಿನಲ್ಲಿ ಕಾಳ್ಗಿಚ್ಚಿನದಾದರೂ ಸರಿ. ಬೈರಾಗಿಗೆ ಎಲ್ಲಿಯ ಮನೆಮಾರು? ಆ ಜ್ವಾಲಾ ಎಲ್ಲಿ ಇದ್ದರೆ ಅಲ್ಲಿ ಅದರ ಹಾರಾಟ ಮೊದಲು. ನಿರಂತರ ತಳಮಳ. ಮೇಲಕ್ಕೆ ಹೋಗಬೇಕೆಂದು ಅದಕ್ಕೆ ಆತುರ. ಹವೆಯ ಒತ್ತಡದಿಂದ ಆ ಜ್ವಾಲೆ ಅಲುಗಾಡುತ್ತದೆ ಎಂದೀರಿ ನೀವು. ನನ್ನ ಅರ್ಥವಂತೂ ಹೀಗೆ. ಮೇಲಿರುವ ಆ ಪರಮಾತ್ಮನನ್ನು, ಆ ತೇಜಃ ಸಮುದ್ರ ಸೂರ್ಯನಾರಾಯಣನನ್ನು ಕಾಣುವುದಕ್ಕಾಗಿ ಅದು ಸದಾ ನೆಗೆಯುತ್ತಿರುತ್ತದೆ. ಹುಟ್ಟಿದಂದಿನಿಂದ ಸಾಯುವವರೆಗೆ ನಿರಂತರ ಹಾರಾಟ ಅದರದು. ಸೂರ್ಯ ಅಂಶಿ; ಜ್ವಾಲೆ ಅಂಶ. ಅಂಶಿಯ ಕಡೆ ಹೋಗಲು ಅಂಶದ ಚಡಪಡ. ಆ ಜ್ವಲೆ ಆರಿದಾಗ ಮಾತ್ರ ಆ ಖಟಿಪಿಟಿ ನಿಂತೀತು. ಅದುವರೆಗೂ ಇಲ್ಲ. ಸೂರ್ಯನಿಗೂ ತಮಗೂ ತುಂಬ ಅಂತರವಿದೆಯೆಂಬ ವಿಚಾರವೇ ಅದಕ್ಕಿಲ್ಲ. ತನ್ನ ಶಕ್ತಿಯಿದ್ದಷ್ಟು ಈ ಭೂಮಿಯಿಂದ ಹಾರುವುದೊಂದು ಮಾತ್ರ ಅದಕ್ಕೆ ಗೊತ್ತು. ಇಂಥ ಈ ಅಗ್ನಿಯ ರೂಪದಲ್ಲಿ ಧಗಧಗಿಸುವ ವೈರಾಗ್ಯವೇ ಪ್ರಕಟವಾಗಿದೆ. ಎಂತಲೇ 'ಅಗ್ನಿಮಿಳೇ' ಎಂದು ವೇದಗಳ ಮೊದಲ ಸೊಲ್ಲು ಹೊರಟದ್ದು.

ಕೋಗಿಲೆ

ಆ ಕೋಗಿಲೆ! ಅದನ್ನು ಹೇಗೆ ತಾನೆ ಮರೆಯಲಿ? ಯಾರನ್ನು ಕರೆಯುತ್ತದೋ ಅದು? ಬೇಸಗೆಯಲ್ಲೆ ಹೊಳೆ ಕೆರೆ ಬತ್ತಿದವು. ಗಿಡಗಳು ಮಾತ್ರ ಚಿಗಿತವು. ಯಾರು ಈ ವೈಭವವನ್ನು ಕೊಟ್ಟರು? ಎಲ್ಲಿದಾನೆ ಆ ವೈಭವದಾತ ಎಂದು ಕೇಳುತ್ತದೆಯೇನು ಆ ಕೋಗಿಲೆ? ಎಂಥ ಉತ್ಕಟ ಮಧುರ ಸ್ವರ! ಹಿಂದೂಧರ್ಮದಲ್ಲಿ ಕೋಗಿಲೆಯ ವ್ರತವಿದೆ. ಕೋಗಿಲೆಯ ಧ್ವನಿ ಕೇಳಿದಲ್ಲದೆ ಊಟ ಮಾಡುವುದಿಲ್ಲವೆಂದು ಮಹಿಳೆಯರು ವ್ರತ ತೊಡುತ್ತಾರೆ. ಕೋಗಿಲೆಯ ರೂಪದಲ್ಲಿ ಪ್ರಕಟವಾಗುವ ಪರಮಾತ್ಮನನ್ನು ನೋಡಲು ಕಲಿಸುವ ವ್ರತ ಇದು. ಎಂಥ ಸುಂದರ ಧ್ವನಿ ಅದರದು. ಉಪನಿಷತ್ತಿನ ಗಾಯನವಿದ್ದಂತೆ! ಅದರ ಧ್ವನಿಯೇನೋ ಕಿವಿಗೆ ಬೀಳುತ್ತದೆ, ಕೋಗಿಲೆ ಮಾತ್ರ ಕಾಣಿಸದು. ಆ ಆಂಗ್ಲಕವಿ ವರ್ಡ್ಸ್‌ವರ್ತ್ ಅದಕ್ಕಾಗಿ ಹುಚ್ಚನಾಗುತ್ತಾನೆ. ಅದನ್ನು ಹುಡುಕುತ್ತಾ ಕಾಡು ಬೆಟ್ಟ ಅಲೆಯುತ್ತಾನೆ.ಇಂಗ್ಲೆಂಡಿನ ಮಹಾಕವಿ ಕೋಗಿಲೆಯನ್ನು ಶೋಧಿಸಿದರೆ, ಭಾರತದ ಸ್ತ್ರೀಯರು ಅದನ್ನು ನೋಡದೆ ಊಟವನ್ನು ಮಾಡುವುದಿಲ್ಲ. ಕೋಗಿಲೆಯ ವ್ರತದಿಂದಾಗಿ ನಮ್ಮ ಸ್ತ್ರೀಯರು ಕವಿಯ ಪದವಿ ಪಡೆದಿದ್ದಾರೆ. ಪರಮಾನಂದದ ಮಧುರ ಧ್ವನಿ ಬೀರುವ ಕೋಗಿಲೆಯ ರೂಪದಲ್ಲಿ ಪರಮಾತ್ಮನೇ ಪ್ರಕಟವಾಗುತ್ತಾನೆ.

ಕಾಗೆ



ಕೋಗಿಲೆಯೇನೋ ಚೆಂದ. ಆ ಕಾಗೆ ಮಾತ್ರ ಕುರೂಪಿಯೇ? ಸಕಲ ಪರಮಾತ್ಮನನ್ನು ಕಂಡಿರಿ. ಇನ್ನು ಸಂಮಿಶ್ರ ಪರಮಾತ್ಮನನ್ನು ನೋಡಿ, ಕಾಗೆಯನ್ನು ಕಂಡು ಬೆರಗಾಗಿ, ನಾನಂತೂ ಅದನ್ನು ತುಂಬಾ ಮೆಚ್ಚುತ್ತೇನೆ, ಅದರ ನುಣ್ಣನೆಯ ಕರ್ರಗಿನ ಕಪ್ಪು ಬಣ್ಣ, ಆ ತೀವ್ರ ಧ್ವನಿ! ಆ ದನಿಯೇನು ಕೆಟ್ಟದೇ? ಅದರಲ್ಲೂ ಮಾಧುರ್ಯವುಂಟು. ರೆಕ್ಕೆಗಳನ್ನು ಪಟ ಪಟ ಬಡಿಯುತ್ತಾ ಬರುವಾಗ ಎಷ್ಟು ಚೆಂದ ಕಾಣುತ್ತದೆ ಆ ಕಾಗೆ! ಮಕ್ಕಳ ಲಕ್ಷ್ಯವನ್ನೆಳೆದುಕೊಳ್ಳುತ್ತದೆ. ಮುಚ್ಚಿದ ಬಾಗಿಲಿನೊಳಗಡೆಗೆ ಕುಳಿತು ಚಿಕ್ಕ ಮಗು ಊಟಮಾಡಲೊಪ್ಪದು. ಹೊರಗಡೆ ಅಂಗಳದಲ್ಲಿ ಒಯ್ದು 'ಕಾವ್ ಕಾವ್' ಎನ್ನುತ್ತ ಅದಕ್ಕೆ ತಿನ್ನಿಸಬೇಕಾಗುತ್ತದೆ. ಕಾಗೆಯನ್ನು ಕಂಡರೆ ಆ ಮಗುವಿಗೆ ಪ್ರೀತಿ. ಅದೇನು ಹುಚ್ಚೇ? ಅಲ್ಲ, ಅಪಾರ ಜ್ಞಾನ ಅದಕ್ಕಿದೆ. ಕಾಗೆಯ ರೂಪದಿಂದ ಪ್ರಕಟಿತವಾದ ಪರಮಾತ್ಮನೊಂದಿಗೆ ಅದು ತಟ್ಟನೆ ಸಮರಸವಾಗುತ್ತದೆ. ತಾಯಿ ಅನ್ನಕ್ಕೆ ಮೊಸರು ನೀಡಲಿ, ತುಪ್ಪ ನೀಡಲಿ, ಸಕ್ಕರೆ

ಹಾಕಲಿ ಆ ಕಡೆ ಮಗುವಿಗೆ ಗಮನವಿಲ್ಲ. ಕಾಗೆಯ ಪಟಪಟ ದನಿ, ಅದರ ಕೂಗಾಟಗಳನ್ನು ನಿರೀಕ್ಷಿಸುವುದರಲ್ಲೇ ಅದಕ್ಕೆ ಸಂತೋಷ.

ರಾಮನ ಬಾಲ್ಯವನ್ನು ತುಳಸೀದಾಸರು ವರ್ಣಿಸಿದ್ದಾರೆ, ಅಂಗಳದಲ್ಲಿ ರಾಮ ಆಡುತ್ತಿದ್ದಾನೆ. ಹತ್ತಿರ ಕಾಗೆ ಇದೆ. ರಾಮ ಮೆಲ್ಲನೆ ಅದನ್ನು ಹಿಡಿಯಲು ಯತ್ನಿಸುತ್ತಾನೆ. ಅದು ದೂರ ಹೋಗುತ್ತದೆ, ಕೊನೆಗೆ ಅವನಿಗೆ ದಣಿವಾಗುತ್ತದೆ. ಒಂದು ಉಪಾಯ ಮಾಡುತ್ತಾನೆ., ಕೈಯಲ್ಲಿ ಮಿಠಾಯಿ ಹಿಡಿದುಕೊಂಡು ಅದರ ಮುಂದೆ ಹಿಡಿಯುತ್ತಾನೆ. ಕಾಗೆ ಸ್ವಲ್ಪ ಹತ್ತಿರ ಬರುತ್ತದೆ. ಈ ವರ್ಣನೆಯಿಂದ ತುಳಸೀದಾಸರು ಪುಟ ಪುಟ ತುಂಬಿದ್ದಾರೆ. ಅದಕ್ಕೆ ಕಾರಣ ಆ ಕಾಗೆ ಪರಮೇಶ್ವರ. ರಾಮನ ಮೂರ್ತಿಯಲ್ಲಿನ ಅಂಶವೇ ಅದರಲ್ಲೂ ಇದೆ, ರಾಮನ ಮತ್ತು ಕಾಗೆಯ ಆ ಪರಿಚಯ, ಪರಮಾತ್ಮ – ಪರಮಾತ್ಮ ಪರಿಚಯ.

ಇಸೋಪ ನೀತಿ

ಸೃಷ್ಟಿಯ ಬಗೆಗೆ ಮಗುವಿಗಿರುವ ಈ ಕೌತುಕದ ಆಧಾರದ ಮೇಲೆಯೇ 'ಇಸೋಪ ನೀತಿ' ಯೆಲ್ಲವೂ ನಿಂತಿದೆ. ಎಲ್ಲಕಡೆಗಳಲ್ಲೂ ಇಸೋಪನಿಗೆ ದೇವರು ಕಾಣಿಸುತ್ತಿದ್ದ. ನನ್ನ ಮೆಚ್ಚುಗೆಯ ಗ್ರಂಥಗಳ ಪಟ್ಟಿಯಲ್ಲಿ ಇಸೋಪ ನೀತಿಗೆ ಮೊದಲನೆ ಸ್ಥಾನ ಕೊಟ್ಟೇನು, ಮರೆಯಲಾರೆ. ಇಸೋಪನ ರಾಜ್ಯದಲ್ಲಿ ಎರಡು ಕೈ, ಎರಡು ಕಾಲಿನ ಈ ಮಾನವ ಪ್ರಾಣಿ ಮಾತ್ರವಲ್ಲ; ನಾಯಿ–ನರಿ, ಮೊಲ–ತೋಳ, ಕಾಗೆ–ಗುಬ್ಬಿ ಎಲ್ಲವೂ ಉಂಟು. ಅವೆಲ್ಲವೂ ಮಾತನಾಡುತ್ತವೆ, ನಗುತ್ತವೆ. ಅದೊಂದು ಪ್ರಚಂಡ ಸಮ್ಮೇಳನ. ಚರಾಚರ ಸೃಷ್ಟಿಯೆಲ್ಲ ಇಸೋಪನೊಂದಿಗೆ ಮಾತನಾಡುತ್ತದೆ. ಅವನಿಗೆ ದಿವ್ಯ ದರ್ಶನವಾಗಿದೆ. ರಾಮಾಯಣ ರಚಿತವಾದುದೂ ಇದೇ ದೃಷ್ಟಿಯಿಂದ, ಇದೇ ತತ್ವದಿಂದ.

ಪರಮಾತ್ಮ

ಸಾರಾಂಶ: ಈ ರೀತಿ ಸೃಷ್ಟಿಯಲ್ಲಿ ನಾನಾ ರೂಪಗಳಿಂದ ಪವಿತ್ರ ನದಿ, ವಿಶಾಲ ಪರ್ವತ, ಗಂಭೀರ ಸಮುದ್ರ, ವತ್ಸಲ ಹಸು, ಉತ್ಸಾಹಿ ಕುದುರೆ, ಗಂಭೀರ ಸಿಂಹ, ಮಧುರ ಕೋಗಿಲೆ, ಸುಂದರ ನವಿಲು, ಸ್ವಚ್ಛ ಮತ್ತು ಏಕಾಂತಪ್ರಿಯ ಸರ್ಪ, ರೆಕ್ಕೆ ಬೀಸುತ್ತಾ ಹಾರುವ ಕಾಗೆ, ಧಡಪಡಿಸುವ ಜ್ವಾಲೆ, ಪ್ರಶಾಂತ ತಾರೆಗಳ ಈ ರೂಪಗಳಿಂದ ಪರಮಾತ್ಮ ಎಲ್ಲೆಲ್ಲೂ ತುಂಬಿಕೊಂಡಿದ್ದಾನೆ. ಕಣ್ಣುಗಳಿಗೆ ನೋಡುವ ರೂಢಿಯಾಗಬೇಕು. ಮೊದಲು ಸ್ಪಷ್ಟ, ಸರಳ ಅಕ್ಷರ; ಅನಂತರ ಚಿಕ್ಕ ಚಿಕ್ಕ ಸಂಯುಕ್ತಾಕ್ಷರ ಕಲಿತ ಹೊರತು ಓದಿನಲ್ಲಿ ಪ್ರಗತಿಯಿಲ್ಲ. ಸಂಯುಕ್ತಾಕ್ಷರ ಮತ್ತೆ ಮತ್ತೆ ಬರುತ್ತದೆ. ದುರ್ಜನರಲ್ಲಿ ಪರಮಾತ್ಮನನ್ನು ಮೆಚ್ಚಬೇಕು. ಪ್ರಹ್ಲಾದನನ್ನು ಮೆಚ್ಚುತ್ತೇವೆ.

ಹಿರಣ್ಯಕಶಿಪುವನ್ನೂ ಮೆಚ್ಚಬೇಕು.

ವೇದದಲ್ಲಿ ರುದ್ರಸೂತ್ರದಲ್ಲಿ ಹೇಳಿದೆ–

" ನಮೋ ನಮಃ ಸ್ತೇನಾನಾಂ ಪತಯೇ ನಮೋ ನಮಃ
ನಮಃ ಪುಂಜಿಷ್ಟೇಭ್ಯೋ ನಮೋ ನಿಷಾದೇಭ್ಯಃ"


" ಬ್ರಹ್ಮ ದಾಶಾ ಬ್ರಹ್ಮ ದಾಸಾ ಬ್ರಹ್ಮೈವೇಮೇ ಕಿತವಾಃ"

" ದರೋಡೆಗಾರರ ಆ ನಾಯಕನಿಗೆ ನಮಸ್ಕಾರ, ಆ ಭಿಲ್ಲ ಕಳ್ಳರಿಗೆ ಮನಸ್ಕಾರ. ಈ ಠಕ್ಕರು, ಈ ದುಷ್ಟರು, ಈ ಕಳ್ಳರು – ಎಲ್ಲರೂ ಬ್ರಹ್ಮರೇ ಎಲ್ಲರಿಗೂ ನಮಸ್ಕಾರ."

ಇದರ ಅರ್ಥವಿಷ್ಟೇ; ಸುಲಭ ಅಕ್ಷರಗಳನ್ನೇನೋ ಕಲಿತೆವು. ಇನ್ನು ಕಠಿಣ ಅಕ್ಷರಗಳನ್ನು ಕಲಿಯಬೇಕು. ಕಾರ್ಲೈಲ್ ಎಂಬ ಲೇಖಕ ' ವಿಭೂತಿ ಪೂಜೆ' ಎಂಬ ಪುಸ್ತಕವನ್ನು ರಚಿಸಿದ್ದಾನೆ. ನೆಪೋಲಿಯನ್ ಕೂಡ ಒಬ್ಬ ವಿಭೂತಿ ಎಂದು ಅದರಲ್ಲಿ ಆತ ಹೇಳಿದ್ದಾನೆ. ಇಲ್ಲಿರುವಾತ ಶುದ್ಧ ಪರಮಾತ್ಮನಲ್ಲ; ಮಿಶ್ರ ಪರಮಾತ್ಮ. ಈತನನ್ನು ಸಹ ಗುರುತಿಸಲು ಕಲಿಯಬೇಕು. ಎಂತಲೇ ತುಳಸೀದಾಸರು ರಾವಣನನ್ನು ' ರಾಮನ ವಿರೋಧಿ ಭಕ್ತ' ಎಂದು ಕರೆದಿರುವುದು. ಈ ಭಕ್ತನದು ಸ್ವಲ್ಪ ಬೇರೆ ರೀತಿ. ಬೆಂಕಿಯಿಂದ ಕಾಲು ಸುಟ್ಟು ಉಬ್ಬುತ್ತದೆ. ಆದರೆ ಬಾತ ಭಾಗವನ್ನು ಬಿಸಿಮಾಡಿ, ಬಾವು ಇಳಿಯುತ್ತದೆ. ತೇಜ ಒಂದೇ ಆವಿರ್ಭಾವ ಬೇರೆ. ರಾಮ–ರಾವಣರಲ್ಲಿ ಆ ಅವಿರ್ಭಾವ ಬೇರೆಬೇರೆಯಾಗಿ ಕಾಣಿದರೂ ಅದನ್ನು ರೂಪಿಸಿದ ಪರಮಾತ್ಮನೊಬ್ಬನೇ.

ಸ್ಥೂಲ – ಸೂಕ್ಷ್ಮ, ಸರಳ, ಮಿಶ್ರ, ಅಕ್ಷರ – ಸಂಯುಕ್ತಾಕ್ಷರ ಎಲ್ಲವನ್ನೂ ಕಲಿಯಿರಿ, ಕಡೆಗೆ ಪರಮಾತ್ಮನಿಲ್ಲದ ಸ್ಥಳವಾವುದೂ ಇಲ್ಲ ಎನ್ನುವುದನ್ನು ಅನುಭವಿಸಿರಿ. ಅಣುರೇಣುಗಳಲ್ಲೂ ಆತನೇ. ಇರುವೆಯಿಂದ ಮೊದಲಾಗಿ ಬ್ರಹ್ಮಾಂಡದವರೆಗೂ ಆತ ತುಂಬಿಕೊಂಡಿದ್ದಾನೆ. ಎಲ್ಲರ ಯೋಗಕ್ಷೇಮವನ್ನೂ ಸದಾ ನೋಡುವ ಕೃಪಾಳು, ಜ್ಞಾನ ಮೂರ್ತಿ, ವತ್ಸಲ, ಸಮರ್ಥ, ಪಾವನ, ಸುಂದರ ಪರಮಾತ್ಮ ನಮ್ಮ ಸುತ್ತ ಮುತ್ತ ಎಲ್ಲೆಲ್ಲೂ ವ್ಯಾಪಿಸಿಕೊಂಡಿದ್ದಾನೆ.

ಖಾದಿ ವಿಚಾರ



ಗ್ರೀನ್ ಎಕಾನಮಿ ಮತ್ತು ಚರಕ

ಇತ್ತೀಚಿನ ದಿನಗಳಲ್ಲಿ ಗ್ರೀನ್ ಎಕಾನಮಿ (ಪರಿಸರಸ್ನೇಹಿ ಅರ್ಥಶಾಸ್ತ್ರ) ತುಂಬ ತುಂಬ ಮಹತ್ವದ ವಿಷಯವಾಗುತ್ತಿದೆ. ಏಕೆಂದರೆ ಮಾನವ ಕುಲದ ಉಳಿವಿಗೆ ಸಂಬಂಧಿಸಿದ ವಿಷಯಗಳನ್ನು ಅದು ಒಳಗೊಂಡಿದೆ. ಪರಿಮಿತ ಭೂಮಿಯ ಮೇಲೆ ಪರಂಪರಾಗತ ಅಪರಿಮಿತ ಉನ್ನತಿಯ ಬೆಳವಣಿಗೆ ಸಾಧ್ಯವಿಲ್ಲವೆಂದು ಈಗ ಸ್ಪಷ್ಟವಾಗಿದೆ. ಟೀಮ್ ಜಾಕ್ಸನ್, ಪೀಟರ್ ವಿಕ್ಟೋರ್ ಮತ್ತು ಇನ್ನೂ ಅನೇಕ ಅರ್ಥಶಾಸ್ತ್ರಜ್ಞರು ಉನ್ನತಿಯನ್ನು ಬೇರೊಂದು ಆಯಾಮದಿಂದ ನೋಡುತ್ತಿದ್ದಾರೆ. ಅಸಹಜ ಬೆಳವಣಿಗೆ ರಹಿತವಾದ ಉನ್ನತಿ ಕುರಿತು ಒತ್ತಿ ಹೇಳುತ್ತಿದ್ದಾರೆ. ಜೊತೆಗೆ ಜನ ಸಮುದಾಯದ ಹಂತದಲ್ಲಿ ಅರ್ಥಶಾಸ್ತ್ರವನ್ನು ಪರಿಸರ ಸ್ನೇಹಿ ಮಾಡುವುದರ ಅಗತ್ಯವನ್ನು ಎತ್ತಿ ತೋರಿಸುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಈ ಪ್ರಬಂಧ ಹಸಿರು ಅರ್ಥಶಾಸ್ತ್ರದ ಸಾಧನೆಯ ಸಾಧ್ಯತೆಗಳನ್ನು ವಿಕೇಂದ್ರಿಕೃತವಾಗಿ, ಸಾಕಷ್ಟು ಮಾನವ ಶ್ರಮ ಹೆಚ್ಚಿಸುವ ಸಾಧನಗಳನ್ನು ಅವಲಂಬಿಸಿ ಸಮುದಾಯದ ಮಟ್ಟದಲ್ಲಿ ಉತ್ಪಾದನೆಯ ಸಾಧ್ಯತೆಗಳೇನು ಎಂಬುದನ್ನು ಕಂಡು ಹಿಡಿಯುವ ಪ್ರಯತ್ನ ಮಾಡಲಾಗಿದೆ. (ಗಓಇಕ-೨೦೧೨) ರ ಪ್ರಕಾರ ಪರಿಸರ ಸ್ನೇಹಿ ಅರ್ಥಶಾಸ್ತ್ರವೆಂದರೆ ಪರಿಸರದ ದುರಂತಗಳನ್ನು ಮತ್ತು ಪ್ರಾಕೃತಿಕ ಸಂಪತ್ತಿನ ಉಪಯೋಗವನ್ನು ಕಡಿಮೆಗೊಳಿಸುತ್ತಾ ಮಾನವ ಕುಲದ ವಿಶೇಷ ಒಳಿತನ್ನು ಮತ್ತು ಸಾಮಾಜಿಕ ಸಮಾನತೆಯನ್ನು ಬಯಸುವುದೇ ಪರಿಸರ ಸ್ನೇಹಿ

ಅರ್ಥಶಾಸ್ತ್ರ. ಸಂಪ್ರಾಕೃತಿಕ ಮಿತಿಯೊಳಗೆ ಆರ್ಥಿಕ ಬೆಳವಣಿಗೆಯನ್ನು ಸಾಧಿಸುವುದು ಹೇಗೆ ಎಂಬುದನ್ನು ಇಂದಿನ ಮನುಕುಲ ಎದುರಿಸುತ್ತಿರುವ ಏಕೈಕ ಬಹುದೊಡ್ಡ ಸವಾಲಾಗಿದೆ. ಭವಿಷ್ಯದಲ್ಲಿ ಮನುಕುಲ ಭೂಗ್ರಹದ ಮಿತಿಯೊಳಗೇ ಕಡ್ಡಾಯವಾಗಿ ಇರಬೇಕು. (ರಾಕ್‌ಸ್ಟ್ರಾಮ್ ಇಖಿಂಐ - ೨೦೦೯) ಮನುಕುಲದ/ ಉನ್ನತಿ ಆರ್ಥಿಕ ಚಟುವಟಿಕೆಗಳಿಗೆ ಪ್ರೇರಕ ಶಕ್ತಿಯಾಗಿದೆ ಮತ್ತು ಆರ್ಥಿಕೋನ್ನತಿ ನ್ಯಾಯಬದ್ಧವೆಂದು ಸಮರ್ಥಿಸುತ್ತದೆ.

ಸಂಪ್ರಾಕೃತಿಕತೆ ಮತ್ತು ಉನ್ನತಿಯ ಮಧ್ಯೆ ಗಾಢವಾದ ಸಂಬಂಧವಿದೆ. ಮತ್ತು

ಬೇರೊಬ್ಬರ ಬಗ್ಗೆ ಬದ್ಧತೆ ಹಾಗೂ ಜವಾಬ್ದಾರಿ ಬೇಕೆಂಬುದನ್ನು ಗಮನದಲ್ಲಿಟ್ಟುಕೊಂಡೆ ಉನ್ನತಿಯನ್ನು ಕಲ್ಪಿಸಿಕೊಳ್ಳಬೇಕು. ಸಂಪ್ರಾಕೃತಿಕತೆಯನ್ನು ಹಾಳುಗೆಡುವ ಅರ್ಥಶಾಸ್ತ್ರ ಅಶಾಶ್ವತ ಉನ್ನತಿಗೆ ಕಾರಣವಾಗುತ್ತದೆ. ಅಶಾಶ್ವತ ಭೋಗವೇ ಸಂಪ್ರಾಕೃತಿಕತೆಯ ಗಂಡಾಂತರದ ಮೂಲವಾಗಿದೆ.

ವರ್ತಮಾನದಲ್ಲಿ ಹವಾಮಾನದಲ್ಲಿಯ ವೈಪರೀತ್ಯ ಆರ್ಥಿಕ ಅಭದ್ರತೆಗೆ ಕಾರಣವಾಗಿದೆ. ಅತ್ಯಗತ್ಯ ಕ್ರಮವನ್ನು ಕೈಗೊಳ್ಳದಿದ್ದರೆ ೫%ರಿಂದ ೨೦%ರವರೆಗೆ ಪ್ರತಿವರ್ಷವೂ ಜಿ.ಡಿ.ಪಿ.ಯ ನಷ್ಟ ಉಂಟಾಗುವುದು. ಆದರೆ ಹವಾಮಾನದ ವೈಪರೀತ್ಯವನ್ನು ಕಡಿಮೆ ಮಾಡುವುದು ಸುಲಭದ ಕೆಲಸವಲ್ಲ. ಅಂತರಾಷ್ಟ್ರೀಯ ಶಕ್ತಿ ಮೂಲ ಏಜೆನ್ಸಿ ಪ್ರಕಾರ ಪ್ರಾಕೃತಿಕ ಉರುವಲು ಶಕ್ತಿಯಿಂದ ಬಿಡುಗಡೆ ಹೊಂದಲು ಇಂದಿನಿಂದ ೨೦೫೦ರ ವರೆಗೆ ಕಡಿಮೆಯಂದರೆ ೧೧ ಟ್ರಿಲಿಯನ್ ಡಾಲರ್ ಬೇಕಾಗುವುದು. ಹವಾಮಾನ ವೈಪರೀತ್ಯದ ಸಮಸ್ಯೆಯನ್ನು ಒಂದು ಪದಾರ್ಥದ ಮಾರುಕಟ್ಟೆ ಬೆಲೆಯಲ್ಲಿ ಪರಿಸರಾತ್ಮಕ ಮತ್ತು ಸಾಮಾಜಿಕ ಬೆಲೆಗಳನ್ನು ಅಂತರ್ಗತಗೊಳಿಸುವ ಮೂಲಕ ಪರಿಸರ ಬದಲಾವಣೆಯ ಸಮಸ್ಯೆಯನ್ನು ಬಗೆಹರಿಸಬಹುದೆಂದು ಸಾಮಾನ್ಯವಾಗಿ ಜನರು ತಿಳಿಯುತ್ತಾರೆ. ತನ್ಮೂಲಕ ಬಳಕೆದಾರರು ಮತ್ತು ಹೂಡಿಕೆದಾರರಿಗೆ ಉತ್ಪನ್ನದ ನಿಜವಾದ ಬೆಲೆಯನ್ನು ತಿಳಿಸಿದಂತಾಗುತ್ತದೆ. ತನ್ಮೂಲಕ ಅವರು ಪರ್ಯಾಯ ಉತ್ಪಾದನಾ ವಿಧಾನಗಳ ಬಗ್ಗೆ ಆಲೋಚಿಸುವಂತೆಯೂ ಬಂಡವಾಳ ಹೂಡುವಂತೆಯೂ ಭಾವಿಸುತ್ತಾರೆ. ಆದರೆ ಕಳೆದ ಹಲವಾರು ದಶಕಗಳ ಅನುಭವ ತಿಳಿಸುವುದೇನೆಂದರೆ ಈ ಪ್ರಕಾರದ ಆರ್ಥಿಕ ಲೆಕ್ಕಾಚಾರವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದು ಕಷ್ಟ.

ಆದ್ದರಿಂದ ಅನೇಕ ಸಂಪ್ರಾಕೃತಿಕ ಅರ್ಥಶಾಸ್ತ್ರಜ್ಞರು ಸಂಪನ್ಮೂಲಗಳ ಕೊರತೆ ಮತ್ತು ಹವಾಮಾನ ವೈಪರೀತ್ಯದ ಒಟ್ಟುಗೂಡುವಿಕೆಯ ಸವಾಲನ್ನು ಎದುರಿಸಲು ಬೃಹತ್ ಪ್ರಮಾಣ ಮತ್ತು ಸಣ್ಣ ಪ್ರಮಾಣದ ಆರ್ಥಿಕ ಉತ್ತರಗಳು ಬೇಕೆಂದು ಆಲೋಚಿಸುತ್ತಿದ್ದಾರೆ. ಇದರ ಸಾಧ್ಯ ಸಾಧ್ಯತೆಯನ್ನು ತಿಳಿಯಲು ಜಾಕ್ಸನ್ ಮತ್ತು ವಿಕ್ಟರ್ ಸಮುದಾಯದ ಮಟ್ಟದಲ್ಲಿ ಪರಿಸರ ಸ್ನೇಹಿ ಅರ್ಥಶಾಸ್ತ್ರದ ಪ್ರಯೋಗ ಮಾಡಿದ್ದಾರೆ.

ಈ ಪ್ರಬಂಧ ಜಾಕ್ಸನ್ ಮತ್ತು ವಿಕ್ಟರ್ ವ್ಯಾಖ್ಯಾನಿಸಿರುವ ಪರಿಸರ ಸ್ನೇಹಿ ವಿಕೇಂದ್ರಿಕೃತ, ಶ್ರಮ ಪ್ರೇರಿತ ಸಾಧನವನ್ನು ಉಪಯೋಗಿಸಿ ಪರಿಸರ ಪ್ರೇಮಿ ಉತ್ಪನ್ನದ ಪದ್ಧತಿಯನ್ನು ಕಂಡು ಹಿಡಿಯಲು ಪ್ರಯತ್ನಿಸುತ್ತದೆ.

(ಮುಂದುವರಿಯುವುದು)

ಸರ್ವೋದಯ ಆಂದೋಲನದ ಮುನ್ನಡೆ

ಅಖಿಲ ಭಾರತ ಸರ್ವೋದಯ ಮಂಡಲಿಯು ಯುವ ವಿಭಾಗವನ್ನು ಹೊಂದಿದೆ. ಅದರ ಹೆಸರು ರಾಷ್ಟ್ರೀಯ ಯುವ ಸಂಘಟನೆ. ಈ ಸಂಘಟನೆ ಪ್ರತಿ ವರ್ಷ ಜೂನ್ ಮೊದಲವಾರದಲ್ಲಿ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಅಖಿಲಭಾರತ ಮಟ್ಟದಲ್ಲಿ ಯುವಕರ ಶಿಬಿರ ನಡೆಸುತ್ತದೆ. ಈ ಶಿಬಿರದಲ್ಲಿ ದೇಶಾದ್ಯಂತ ಬಂದ ಸುಮಾರು 200 ಯುವಕ-ಯುವತಿಯರು ಭಾಗವಹಿಸುತ್ತಾರೆ. ಈ ಯುವ ಸಂಘಟನೆ ಸರ್ವೋದಯ ಆಂದೋಲನದಲ್ಲಿ ಕೆಲಸಮಾಡಿಕೊಂಡು ಬರುತ್ತಿದೆ. ಮುಖ್ಯವಾಗಿ ಶಾಂತಿ ಸೇನೆಯ ಕೆಲಸ ಮಾಡುತ್ತದೆ. ಇತ್ತೀಚೆಗೆ ಉತ್ತರ ಪ್ರದೇಶದ ಮುಜಫರ್ ನಗರದಲ್ಲಿ ಸಂಭವಿಸಿದ್ದ ಕೋಮು ಹಿಂಸಾಚಾರ ಗಲಭೆಯಲ್ಲಿ ಶಾಂತಿಪಾಲನೆಯ ಕೆಲಸವನ್ನು ಈ ಯುವ ಸಂಘಟನೆಯ ಕಾರ್ಯಕರ್ತರುಮಾಡಿದ್ದರು. ಈ ಸಂಘಟನೆಯ ಯುವ ಶಿಬಿರವೊಂದು ಕೆಲವಾರು ವರ್ಷಗಳ ಹಿಂದೆ ಮೇಲುಕೋಟೆಯಲ್ಲಿ ಜನಪದ ಸೇವಾ ಟ್ರಸ್ಟ್‌ನ ಹೊಸ ಜೀವನ ದಾರಿ ಕೇಂದ್ರದಲ್ಲಿ ನಡೆದಿತ್ತು. ಈಗ ಪುನಃ ಅಂಥದೇ ಒಂದು ಶಿಬಿರ ಜೂನ್ ಒಂದರಿಂದ ಏಳರವರೆಗೆ ಬೆಂಗಳೂರು ನಗರದ ಸುಂಕದಕಟ್ಟೆ ಮಾಗಡಿ ರೋಡ್‌ನಲ್ಲಿರುವ ವಿಶ್ವ ನೀಡಂ ಆಶ್ರಮದಲ್ಲಿ ನಡೆಯಲಿದೆ. ಶಿಬಿರದಲ್ಲಿ ದೇಶದ ಪ್ರಚಲಿತ ಸಮಸ್ಯೆಗಳ ನಿವಾರಣೆಯಲ್ಲಿ ಸರ್ವೋದಯ ವಿಚಾರಾಧಾರಿತ ಕಾರ್ಯಕ್ರಮಗಳು ಎಂಥದ್ದಾಗಿರಬಲ್ಲವು ಎಂಬುದರ ಬಗ್ಗೆ ಚರ್ಚೆ ನಡೆಯಲಿದೆ. ಈ ಶಿಬಿರದಲ್ಲಿ ದೇಶದ ದಕ್ಷಿಣದ ನಾಲ್ಕು ರಾಜ್ಯಗಳ ಯುವಕರು ಭಾಗವಹಿಸುತ್ತಾರೆ. ರಾಷ್ಟ್ರ ಮಟ್ಟದ ಸರ್ವೋದಯ ನಾಯಕರು ಕೂಡ ಭಾಗವಹಿಸುವರು. ಶಿಬಿರದ ಸಂಘಟನೆಯನ್ನು ಪ್ರೇರಣಾ ಎಂಬ ಹಿರಿಯ ಕಾರ್ಯಕರ್ತೆ ಸಂಘಟಿಸುತ್ತಿದ್ದಾರೆ. ಅವರ ಸಂಪರ್ಕದ ದೂರವಾಣಿ ಸಂಖ್ಯೆ : 09769838621.

*****

ಮುಂಬೈ ಬಳಿ ದೇವನಾರ್‌ನಲ್ಲಿ ಇರುವ ಅತಿ ದೊಡ್ಡ ಕಸಾಯಿ ಖಾನೆಯಲ್ಲಿ ಮಾಂಸಕ್ಕಾಗಿ ಗೋವಧೆ ಅವ್ಯಾಹತವಾಗಿ ನಡೆಯುತ್ತಿದೆ. ಇದನ್ನು ನಿಲ್ಲಿಸುವುದಕ್ಕಾಗಿ ಸಂತ ವಿನೋಬಾರವರ ಮಾರ್ಗದರ್ಶನದಲ್ಲಿ ಮತ್ತು ಅವರ ಆಶೀರ್ವಾದದೊಂದಿಗೆ ಗೋರಕ್ಷಾ ಸತ್ಯಾಗ್ರಹ ಪ್ರಾರಂಭವಾಯಿತು. ಅದು ಮುಂಬೈ ಮಹಾನಗರದ ಘಾಟ್‌ಕೋಪರ್ ಎಂಬ ಉಪನಗರದಲ್ಲಿ ಸತ್ಯಾಗ್ರಹ ನಡೆಯುತ್ತಿದೆ. ಸತ್ಯಾಗ್ರಹ ನಡೆಯುತ್ತಿರುವ ಸ್ಥಳ "ಸರ್ವೋದಯ ತೀರ್ಥವೆಂದೇ ಹೆಸರುಪಡೆದಿದೆ." ಈ ಸತ್ಯಾಗ್ರಹ ಈಗ ತನ್ನ ಮೂವತ್ತಮೂರನೆಯ ವರ್ಷಕ್ಕೆ ಕಾಲಿಟ್ಟಿದೆ. ಸತ್ಯಾಗ್ರಹದಲ್ಲಿ ಆಸಕ್ತಿಯುಳ್ಳವರು ಭಾಗವಹಿಸಬಹುದು.

ಸಂಪರ್ಕಕ್ಕೆ ದೂರವಾಣಿ ಸಂಖ್ಯೆ ಸುರೇಂದ್ರ ಕೌಲಗಿ – 9141700812.

ಜನಪದ ಸೇವಾ ಟ್ರಸ್ಟ್ ಸಮಾಚಾರ

ಮೇ ತಿಂಗಳಲ್ಲಿ ಟ್ರಸ್ಟಿನ ದತ್ತು ವಿಭಾಗಕ್ಕೆ ಸುಮಾರು ನಾಲ್ಕು ವರ್ಷದ ಹೆಣ್ಣು ಮಗುವೊಂದು ಪ್ರವೇಶ ಪಡೆಯಿತು.

**

ಖಾದಿ ಉದ್ಯಮದಲ್ಲಿ ಸುಧಾರಣೆ ತರುವುದಕ್ಕಾಗಿ ಮತ್ತು ಭ್ರಷ್ಟ ಖಾದಿ ಸಂಸ್ಥೆಗಳನ್ನು ಉತ್ಪಾದನಾ ಕ್ಷೇತ್ರದಿಂದ ದೂರವಿಡುವುದಕ್ಕಾಗಿ ಖಾದಿ ಆಯೋಗವು ಜಾರಿಗೆ ತಂದಿರುವ "ಖಾದಿ ಮಾರ್ಕ್" ಯೋಜನೆಯ ಬಗ್ಗೆ ತಿಳಿಯಲು ಮತ್ತು ಖಾದಿ ಕಸಬುದಾರರ ಕ್ಷೇಮ ದತ್ತಿ ನಿದಿಯ ಸಭೆಯಲ್ಲಿ ಭಾಗವಹಿಸಲು ಟ್ರಸ್ಟಿನ ಕಾರ್ಯದರ್ಶಿಯವರು ಆ ಎರಡು ಸಭೆಗಳಲ್ಲಿ ಭಾಗಿಯಾಗಿದ್ದರು.

**

ದತ್ತು ಕೇಂದ್ರದಿಂದ ಮಧ್ಯಂತರ ಅವಧಿಗಾಗಿ ಒಂದು ಮಗುವಿಗೆ ಪೋಷಕ ತಂದೆ-ತಾಯಿ ಆಗಿದ್ದವರಿಗೆ ವಿಧಿವತ್ತಾಗಿ ಒಂದು ಮಗುವನ್ನು ದತ್ತು ಕೊಡಲಾಯಿತು.

**

ಆಧುನಿಕ ಯುಗದ ಜಂಜಾಟದ ಜೀವನಕ್ಕೆ ಪರ್ಯಾಯವಾಗಿ ಸುಸ್ಥಿರ ಮತ್ತು ಅರ್ಥಪೂರ್ಣ ಜೀವನ ಪದ್ಧತಿಯ ಹುಡುಕಾಟದಲ್ಲಿ ಉನ್ನತ ವ್ಯಾಸಂಗ ಮಾಡಿದ ಮತ್ತು ಅಮೇರಿಕಾದಲ್ಲಿಯೂ ಇದ್ದು ಬಂದ ಅನೇಕ ಯುವಕರು ದೇಶದಲ್ಲಿದ್ದಾರೆ. ಆಗಾಗ್ಗೆ ಹುಡುಕಾಟದ ಇಂತಹ ಯುವಕರು ಟ್ರಸ್ಟಿಗೆ ಬರುವುದುಂಟು. ಇತ್ತೀಚಿಗೆ ಒಬ್ಬ ಯುವಕ ಮಹಾರಾಷ್ಟ್ರದಿಂದ ಬಂದಿದ್ದು ಟ್ರಸ್ಟಿನ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಾ ತನ್ನ ಶೋಧನೆಯನ್ನು ಮುಂದುವರೆಸಿದ್ದಾರೆ.

**

ಇತ್ತೀಚೆಗೆ ಟ್ರಸ್ಟಿಗೆ ಭೇಟಿಕೊಟ್ಟವರಲ್ಲಿ ಆನಂದರಾವ್ ಬಾಟ್ನಿ ಮೈಸೂರು, ಬೆಂಗಳೂರಿನ ಪೂರ್ಣಪ್ರಜ್ಞ ಶಾಲೆಯ ರಘುರಾಮ್ ಪ್ರಮುಖರು.

**

ಟ್ರಸ್ಟಿನ ಕಾರ್ಯಚಟುವಟಿಕೆಗಳನ್ನಾಧರಿಸಿದ ಆಫೀಸ್ ಕೆಲಸಕ್ಕಾಗಿ ಅತ್ಯಗತ್ಯವಾಗಿದ್ದ ಹೆಚ್.ಪಿ ಪ್ರಿಂಟರ್ ಕಮ್ ಸ್ಕ್ಯಾನರ್ ಕಮ್ ಫೋಟೋ ಕಾಪಿಯರ್‌ನ್ನು ಖರೀದಿಸಲಾಯಿತು. ಇದರಿಂದಾಗಿ ದತ್ತು ಕೇಂದ್ರದ ವ್ಯವಹಾರಕ್ಕೆ, ಖಾದಿ ಕೇಂದ್ರದ ವ್ಯವಹಾರಕ್ಕೆ, ಜನಪದ ವಿಚಾರದ ಕೆಲಸಕ್ಕೆ ಅನುಕೂಲವಾಗಿದೆ.

ಜನಪದ ನಿಲಯದ ಅಂತರಂಗದಲ್ಲಿ – ೧೨೩



(ಕಳೆದ ಸಂಚಿಕೆಯಿಂದ ಮುಂದುವರೆದದ್ದು)

ಟ್ರಸ್ಟಿನ ಆಶ್ರಯದಲ್ಲಿ ಪಿ.ಯು.ಸಿ ಕಾಲೇಜೊಂದನ್ನು ಸ್ಥಾಪಿಸಬೇಕೆಂಬ ಕನಸನ್ನು ಕಂಡ ಮೇಲೆ ಆ ಕನಸಿನಲ್ಲಿ ಕಾಲೇಜಿಗೆ ಅಗತ್ಯವಾದ ಸಿಬ್ಬಂದಿ ನೇಮಕಾತಿಯ ವಿಷಯ ಕನಸಲ್ಲಿ ಒಡಮೂಡತೊಡಗಿತು. ಸಿಬ್ಬಂದಿಯ ನೇಮಕಾತಿ ಬಂದೊಡನೆಯೇ ಕನ್ನಡ ಭಾಷೆಯಲ್ಲಿ ಉನ್ನತ ಸ್ನಾತಕೋತ್ತರ ಪದವಿ ಪಡೆದ ವಿಷಯ ಗೊತ್ತಾಯಿತು. ಟ್ರಸ್ಟಿನ ಆ ಹಳೆಯ ವಿದ್ಯಾರ್ಥಿಗೆ ಸ್ನಾತಕೋತ್ತರ ಪದವಿ ಪಡೆಯಲು ಅನುಕೂಲವಾಗುವಂತೆ ಕೆಲ ಧರ್ಮದರ್ಶಿಗಳು ಪ್ರಯತ್ನಿಸಿದ್ದರು. ಔಪಚಾರಿಕತೆಯ ಅನುಗುಣವಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಯಿತು. ಹಲವಾರು ಅರ್ಜಿಗಳು ಬಂದವು. ಅದರಲ್ಲಿ ಆ ಹಳೆಯ ವಿದ್ಯಾರ್ಥಿಯ ಅರ್ಜಿಯು ಕೂಡ ಒಂದಾಗಿತ್ತು. ಮೇಲುಕೋಟೆ ಗ್ರಾಮದ ಓರ್ವ ಅಭ್ಯರ್ಥಿಯಿಂದಲೂ ಅರ್ಜಿ ಬಂದಿತ್ತು. ಸಂದರ್ಶನಕ್ಕೆ ಎಲ್ಲರನ್ನು ಕರೆಯಲಾಯಿತು. ಸಂದರ್ಶನದಲ್ಲಿ ಮೇಲುಕೋಟೆಯ ಅಭ್ಯರ್ಥಿ ಹೆಚ್ಚು ಅರ್ಹನೆಂದು ಸಂದರ್ಶನ ನಡೆಸಿದ್ದ ಟ್ರಸ್ಟಿನ ಧರ್ಮದರ್ಶಿಗಳಿಗೆಲ್ಲ ಮನವರಿಕೆಯಾಗಿತ್ತು. ಆದರೆ ಸಂಸ್ಥೆಯ ಆ ಹಳೆಯ ವಿದ್ಯಾರ್ಥಿಯನ್ನೇ ಆಯ್ಕೆ ಮಾಡಲಾಯಿತು. ಅವರಿಂದ ಹೆಚ್ಚಿನ ಸೇವೆ ಪಡೆಯಬಹುದೆಂದು ಟ್ರಸ್ಟಿನ ಕಾರ್ಯಕ್ರಮಗಳಿಗೆ ಅನುಕೂಲವಾಗುವುದೆಂದು ಭಾವಿಸಿ ಹಳೆಯ ವಿದ್ಯಾರ್ಥಿಯನ್ನು ಆಯ್ಕೆ ಮಾಡಲಾಯಿತು. ಮುಂದೆ ಕಾಲಕ್ರಮೇಣ ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದ ಉಪನ್ಯಾಸಕರನ್ನು ಮತ್ತು ಬೋಧಕೇತರ ಸಿಬ್ಬಂದಿಯನ್ನು ನೇಮಿಸಲಾಯಿತು. ಟ್ರಸ್ಟಿನ ಹಳೆಯ ವಿದ್ಯಾರ್ಥಿಯನ್ನು ಕಾಲೇಜಿನ ತಾತ್ಕಾಲಿಕ ಪ್ರಾಂಶುಪಾಲರನ್ನಾಗಿ ಮಾಡಲಾಯಿತು. ಕ್ರಮೇಣ ವಿದ್ಯಾರ್ಥಿಗಳ ಸಂಖ್ಯೆ ಅದರಲ್ಲೂ ವಿದ್ಯಾರ್ಥಿನಿಯರ ಸಂಖ್ಯೆ ಹೆಚ್ಚಾಯಿತು. ಕಾಲೇಜಿಗೆ ಅಗತ್ಯವಾದ ಪೀಠೋಪಕರಣಗಳನ್ನು ಮಾಡಿಸಿದ್ದಾಯಿತು. ಆದರೆ ಕಾಲ ಕಳೆದಂತೆ ಕಾಲೇಜಿನ ಸಿಬ್ಬಂದಿಯಿಂದ ಅಪೇಕ್ಷಿಸಲಾಗಿದ್ದ ಸಹಕಾರ ಟ್ರಸ್ಟಿಗೆ ಸಿಗದೆ ಹೋಯಿತು. ಕಾಲೇಜಿಗೆ ಅನುದಾನ ದೊರೆತ ಮೇಲೆ ಸಿಬ್ಬಂದಿಯ ನಡವಳಿಕೆಯೇ ಬೇರೆ ಆಯಿತು. ಆದರೂ ಕೂಡ ಕಾರ್ಯದರ್ಶಿಯವರು ಕಾಲೇಜಿನ ನಿರಂತರ ಬೆಳವಣಿಗೆಗಾಗಿ ಶ್ರಮಿಸುತ್ತಲೇ

ಇದ್ದರು. ಬೆಂಗಳೂರಿಗೆ ಅಲೆದಾಡಿ ರಾಷ್ಟ್ರೀಯ ಸೇವಾ ಯೋಜನೆಯನ್ನು ಮಂಜೂರು ಮಾಡಿಸಿಕೊಂಡು ಬಂದರು. ಆದರೆ ಆ ಯೋಜನೆಯಿಂದ ವಿದ್ಯಾರ್ಥಿಗಳಿಗಾಗಲೀ, ಸುತ್ತಲಿನ ಗ್ರಾಮಗಳಿಗಾಗಲೀ, ಟ್ರಸ್ಟಿನ ಸೇವಾ ಕಾರ್ಯಗಳಿಗಾಗಲೀ ಯಾವೆಲ್ಲಾ ಪ್ರಯೋಜನ ಆಗಬೇಕಿತ್ತೋ ಅದು ಆಗಲಿಲ್ಲ. ಟ್ರಸ್ಟ್ ಬಹಳ ವರ್ಷಗಳಿಂದ ಗಾಂಧೀ ವಿಚಾರದ ಆಧಾರದ ಮೇಲೆ ಕೆಲಸ ಮಾಡಿಕೊಂಡು ಬರುತ್ತಿದ್ದುದರಿಂದ ಅದಕ್ಕೆ ಜೀವನ ಶಿಕ್ಷಣದಲ್ಲಿ ನಂಬಿಕೆ ಇದ್ದುದರಿಂದ ಕಾಲೇಜಿನಲ್ಲಿ ತೋಟಗಾರಿಕೆ ಮತ್ತು ನೂಲುಗಾರಿಕೆ ಪ್ರಾರಂಭಿಸಲು ಯೋಚಿಸಲಾಯಿತು. ಕಾಲೇಜಿನ ಕಟ್ಟಡದ ಹಿಂಭಾಗದಲ್ಲಿದ್ದ ವಿಶಾಲವಾದ ಹಿತ್ತಲಿನಲ್ಲಿ ಸುಮಾರು ನೂರು ಗಿಡಗಳುಳ್ಳ ಬಾಳೆ ತೋಟವನ್ನು ಮಾಡಲಾಯಿತು. ಬಾಳೆ ತೋಟದಿಂದ ಬರುವ ಆದಾಯವನ್ನು ಬಂಡವಾಳವನ್ನಾಗಿ ಮಾಡಿಕೊಂಡು ವಿದ್ಯಾರ್ಥಿಗಳೇ ವಿದ್ಯಾರ್ಥಿಗಳಿಗಾಗಿ ಒಂದು ಸಣ್ಣ ಕ್ಯಾಂಟೀನ್ ಪ್ರಾರಂಭಿಸಬೇಕೆಂಬ ಉದ್ದೇಶವಿತ್ತು. ಹಳ್ಳಿಯಿಂದ ಬರುವ ಮಕ್ಕಳಿಗೆ ಅದರಿಂದ ಸಹಾಯ ವಾಗಬಹುದೆಂದು ಎಣಿಸಲಾಗಿತ್ತು. ಹಳ್ಳಿಯ ಮಕ್ಕಳೇ ಕಾಲೇಜಿನಲ್ಲಿ ಹೆಚ್ಚಾಗಿ ಇದ್ದುದರಿಂದ ತೋಟದ ಕೆಲಸ ಚೆನ್ನಾಗಿ ನಡೆಯುವುದೆಂದು ಭಾವಿಸಲಾಗಿತ್ತು. ತೋಟದ ಈ ಕೆಲಸದೊಂದಿಗೆ ನೂಲುವ ಕ್ರಿಯೆಯನ್ನು ಜೋಡಿಸಿದರೆ ಮಕ್ಕಳಿಗೆ ವಿಷೇಶ ಅನುಭವ ಸಿಗುವುದೆಂದು ಬಯಸಲಾಗಿತ್ತು. ಆದರೆ ಈ ಎಲ್ಲ ಕೆಲಸಗಳ ಬಗ್ಗೆ ಯಾರಿಂದ ವಿಶೇಷ ಆಸಕ್ತಿ ಮತ್ತು ಸಹಕಾರ ಅಗತ್ಯವಾಗಿತ್ತೊ ಅದು ದೊರೆಯದೇ ಹೋಯಿತು. ಸಿಬ್ಬಂದಿ ವರ್ಗದ ಒರ್ವ ಸದಸ್ಯ ಚರಕಗಳನ್ನು ಎತ್ತಿ ಕಲ್ಯಾಣಿಯಲ್ಲಿ ಬಿಸಾಡಬೇಕೆಂದು ವಿದ್ಯಾರ್ಥಿಗಳಿಗೆ ಕುಮ್ಮಕ್ಕು ಕೊಟ್ಟರು. ವಿದ್ಯಾರ್ಥಿಗಳು ಈ ಎಲ್ಲ ಕಾರ್ಯಗಳಲ್ಲಿ ಆಸಕ್ತಿ ತೋರಿಸುತ್ತಿದ್ದರೂ ಸಿಬ್ಬಂದಿಯ ಅಸಹಕಾರದ ಕಾರಣದಿಂದಾಗಿ ಅನಿವಾರ್ಯವಾಗಿ ನಿಲುಗಡೆಗೆ ಬಂದವು. ರಾಷ್ಟ್ರೀಯ ಸೇವಾ ಯೋಜನೆಯೂ ಸ್ಥಗಿತಗೊಂಡಿತು. ಸ್ವಲ್ಪ ಸಮಯದ ನಂತರ ಟ್ರಸ್ಟಿನ ಕಾರ್ಯದರ್ಶಿಯವರು ಎರಡನೇಯ ಬಾರಿಗೆ ರಾಷ್ಟ್ರೀಯ ಸೇವಾ ಯೋಜನೆಯನ್ನು ಕಾಲೇಜಿಗೆ ಮಂಜೂರು ಮಾಡಿಸಿಕೊಂಡು ಬಂದರು. ಆದರೆ ಎರಡನೇ ಅವಧಿಯ ರಾಷ್ಟ್ರೀಯ ಸೇವಾ ಯೋಜನೆಯ ಘಟಕವೂ ಕಣ್ಮರೆಮುಚ್ಚಿತು. ಮುಂದೆ ಕೆಲ ಕಾಲದ ನಂತರ ವಾಣಿಜ್ಯ ವಿಭಾಗವನ್ನು ಪ್ರಾರಂಭಿಸಲು ಯೋಚನೆ ಮಾಡಿ ಅದಕ್ಕೆ ಇಲಾಖೆಯಿಂದ ಮಂಜೂರು ಮಾಡಿಸಿಕೊಂಡು ಬರಲಾಯಿತು. ಓರ್ವ ಅರ್ಹ ಅಧ್ಯಾಪಕಿಯನ್ನು ಗೊತ್ತು ಮಾಡಲಾಯಿತು. ಕೆಲವು ವಿದ್ಯಾರ್ಥಿಗಳನ್ನು ವಾಣಿಜ್ಯ ವಿಭಾಗಕ್ಕೆ ಸೇರಿಸಿಕೊಂಡರು. ಒಂದೆರೆಡು ದಿನ ವಾಣಿಜ್ಯ ವಿಭಾಗದ ತರಗತಿಗಳು ನಡೆದವು. ಆದರೆ ಒಂದು ದಿನ ಯಾವ ವಿದ್ಯಾರ್ಥಿಗಳು ವಾಣಿಜ್ಯ ತರಗತಿಗೆ ಬರಲೇ ಇಲ್ಲ. ಯಾವ ಮುನ್ಸೂಚನೆ ಇಲ್ಲದೇ ವಿದ್ಯಾರ್ಥಿಗಳ ದಿಢೀರ್ ಈ ವರ್ತನೆ

ಆಘಾತವನ್ನು ಉಂಟುಮಾಡಿತು. ಈ ಘಟನೆ ನಡೆಯುವುದಕ್ಕೆ ಯೊರೋ ಓರ್ವ ಸಿಬ್ಬಂದಿಯ ಕೈವಾಡವಿದೆಯೆಂದು ಗೊತ್ತಾಯಿತು. ವಿದ್ಯಾರ್ಥಿಗಳಿಗೆ ಉಳಿದ ಸಿಬ್ಬಂದಿಗಳಿಗೆ ಆಸಕ್ತಿ ಇಲ್ಲವೆಂದು ಗೊತ್ತಾದ ಮೇಲೆ ಅಧ್ಯಾಪಕಿಯನ್ನು ಹಿಂದಕ್ಕೆ ಕಳುಹಿಸಲಾಯಿತು. ವಾಣಿಜ್ಯ ವಿಭಾಗ ಶಾಶ್ವತವಾಗಿ ಮುಚ್ಚಿ ಹೋಯಿತು. ಮುಂದೆ ೨೦೧೨ರ ಸಾಲಿನಲ್ಲಿ ಸರ್ಕಾರ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸಿ ವಾಣಿಜ್ಯ ವಿಭಾಗವನ್ನು ಪ್ರಾರಂಭಿಸಿತು. ಈಗ ಸರ್ಕಾರಿ ಕಾಲೇಜಿನಲ್ಲಿ ಅನೇಕ ವಿದ್ಯಾರ್ಥಿಗಳು ಕಲಾ ಮತ್ತು ವಾಣಿಜ್ಯ ವಿಭಾಗವನ್ನು ಓದುತ್ತಿದ್ದಾರೆ. ಪದವೀಧರರಾಗುತ್ತಿದ್ದಾರೆ. ಕಾಲೇಜಿನ ಅಭಿವೃದ್ಧಿಗೆ ಸಹಕಾರಿಯಾಗಲೆಂದು ವಾಣಿಜ್ಯ ವಿಭಾಗದಂತೆಯೇ ವೃತ್ತಿಪರ ಶಿಕ್ಷಣ ಯೋಜನೆಯನ್ನು ತೋಟಗಾರಿಕೆ ಒಂದು ವಿಷಯವನ್ನಾಗಿ ತರಲಾಯಿತು. ಹಲವಾರು ವಿದ್ಯಾರ್ಥಿಗಳು ಈ ಕೋರ್ಸಿಗೆ ಸೇರಿಕೊಂಡರು. ಮೇಲುಕೋಟೆಯಲ್ಲಿದ್ದ ಓರ್ವ ನಿವೃತ್ತ ಕೃಷಿ ಅಧಿಕಾರಿಯನ್ನು ತಾತ್ಕಾಲಿಕ ಉಪನ್ಯಾಸಕರನ್ನಾಗಿ ಗೊತ್ತುಮಾಡಲಾಯಿತು. ಆದರೆ ಯಥಾ ಪ್ರಕಾರ ಪದವಿ ಪೂರ್ವ ಕಾಲೇಜಿನ ಸಿಬ್ಬಂದಿಯ ಅಸಹಕಾರದ ಕಾರಣದಿಂದ ಆ ವಿಭಾಗ ಮುಚ್ಚಿಹೋಯಿತು. ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಹೊರತರುವುದಕ್ಕಾಗಿ "ಜನಪದ ದೀಪ" ಎಂಬ ಹೆಸರಿನಲ್ಲಿ ಕೈ ಬರಹದ ಭಿತ್ತಿ ಪತ್ರಿಕೆಯನ್ನು ಪ್ರಾರಂಭಿಸಲಾಯಿತು. ಒಂದು ಅಥವಾ ಎರಡು ಸಂಚಿಕೆಗಳು ಮಾತ್ರ ಹೊರಬಂದವು. ಮುಂದೆ ಆ ಕೈಬರಹದ ಪತ್ರಿಕೆಯನ್ನು ಮುದ್ರಿತಗೊಳಿಸಿ ಒಂದೆರಡು ಸಂಚಿಕೆಗಳನ್ನು ಹೊರತರಲಾಯಿತು. ಕೊನೆಗೆ ಅದು ಕೂಡ ಸಿಬ್ಬಂದಿಯ ಅಸಹಕಾರದಿಂದ ನಿಂತು ಹೋಯಿತು. ಹೀಗೆ ಒಂದಾದ ಮೇಲೆ ಒಂದು ಕಾಲೇಜಿನ ಎಲ್ಲ ಅಭಿವೃದ್ಧಿ ಯೋಜನೆಗಳು ಸಿಬ್ಬಂದಿಯ ಅಸಹಕಾರದ ಕಾರಣದಿಂದಾಗಿ , ಅವರ ಕೇವಲ ಸ್ವಹಿತದ ಕಾರಣದಿಂದ ನಿಂತುಹೋದವು. ಕಾಲೇಜನ್ನು ಬೇರೆ ಆಡಳಿತ ವರ್ಗಕ್ಕೆ ಹಸ್ತಾಂತರಗೊಳಿಸಬೇಕೆಂಬ ವಿಚಾರ ಬರಲಾರಂಭಿಸಿತು. ಆದರೆ ಯಾವ ಕಾರಣಕ್ಕೂ ಕಾಲೇಜು ಮೇಲುಕೋಟೆಯಿಂದ ಹೊರಗೆ ಹೋಗಬಾರದೆಂಬ ವಿಚಾರವು ಪ್ರಬಲವಾಗಿತ್ತು. ಕಾಲೇಜಿನ ಭವಿತವ್ಯದ ಬಗ್ಗೆ ವಿಚಾರಗಳ ತೂಗುಯ್ಯಾಲೆ ನಡೆಯುತ್ತಿದ್ದ ಸಂದರ್ಭದಲ್ಲಿ ಮೈಸೂರಿನಲ್ಲಿರುವ ಪರಕಾಲ ಮಠದವರು ತಮ್ಮ ಯಾವುದೋ ವಿಶೇಷ ಉತ್ಸವದ ಸಂದರ್ಭದಲ್ಲಿ ಹಲವಾರು ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳ ಬಯಸಿದ್ದರು. ಮೇಲುಕೋಟೆಗೂ ಶ್ರೀ ಪರಕಾಲ ಮಠಕ್ಕೂ ಪುರಾತನ ಸಂಬಂಧವಿದೆ. ಒಂದು ಸಲ ಆ ಮಠದ ಕಾರ್ಯದರ್ಶಿಯವರು ಕಾರ್ಯ ನಿಮಿತ್ತ ಮೇಲುಕೋಟೆಗೆ ಬಂದಾಗ ಟ್ರಸ್ಟಿಗೂ ಭೇಟಿಕೊಟ್ಟರು. ಅವರು ಮಠದ ಯೋಜನೆಗಳನ್ನು ಮುಂದಿಟ್ಟಾಗ ಟ್ರಸ್ಟಿನ ಕಾರ್ಯದರ್ಶಿಯವರು ಕಾಲೇಜಿನ ಹಸ್ತಾಂತರದ ವಿಷಯವನ್ನು ಅವರಿಗೆ

ತಿಳಿಸಿದರು. ಅವರು ತುಂಬ ಸಂತೋಷದಿಂದ ವಿಷಯವನ್ನು ಸ್ವಾಗತಿಸಿ ಪರಕಾಲ ಮಠಕ್ಕೆ ಹಸ್ತಾಂತರಿಸುವ ಪ್ರಕ್ರಿಯೆಯನ್ನು ಮಾಡುವುದಾಗಿ ಹೇಳಿದರು. ಅದರಂತೆ ಕಾಲಾಂತರದಲ್ಲಿ ಟ್ರಸ್ಟಿನ ಪೂರ್ಣ ಪ್ರಮಾಣದ ಅನುದಾನಿತ ಕಾಲೇಜನ್ನು ಪರಕಾಲಮಠಕ್ಕೆ ವಹಿಸಿಕೊಡಲಾಯಿತು. ಕಾಲೇಜಿನ ಸಿಬ್ಬಂದಿಯಲ್ಲಿ ಅದ್ಯಾವುದೋ ಕಾರಣದಿಂದ ಭೂಗೋಳ ಉಪನ್ಯಾಸಕರ ನೇಮಕಾತಿ ತಡವಾಯಿತು. ಆಗ ಕಾಲೇಜು ವಿದ್ಯಾರ್ಥಿಗಳು ಮುಷ್ಕರ ಪ್ರಾರಂಭಿಸಿ ಗಲಾಟೆ ಮಾಡಲಾರಂಭಿಸಿದರು. ಅಷ್ಟೇ ಅಲ್ಲ ಕಾರ್ಯದರ್ಶಿಯವರ ಮನೆಯ ಮೇಲೆ ಕಲ್ಲನ್ನು ತೂರಿದರು. ಮನೆಯೊಳಗೆ ನುಗ್ಗಿ ದಾಂಧಲೆ ಮಾಡಿದರು. ವಿದ್ಯಾರ್ಥಿಗಳ ಈ ಅಸ್ವಾಭಾವಿಕ ಕಾರ್ಯಕ್ಕೆ ಯಾರು ಕಾರಣ್ಣರಾದರೆಂಬುದು ನಿಗೂಢವಾಗಿಯೇ ಉಳಿಯಿತು. ಕಾರ್ಯದರ್ಶಿಯವರಿಗೆ ಬಹಳ ಬೇಸರವಾಯಿತು. ಸಿಬ್ಬಂದಿ ವರ್ಗ ಕೂಡ ಸರಿಯಾಗಿ ಸಹಕರಿಸುವುದನ್ನು ಕಡಿಮೆ ಮಾಡುತ್ತಾ ಬಂದರಲ್ಲದೇ ಅವರಿಗೆ ದೂರವಾಣೀ ಮೂಲಕ ಅವಮಾನವನ್ನು ಮಾಡಲು ಸಹ ಪ್ರಾರಂಭಿಸಿದರು. ಯಾವುದೇ ಒಂದು ರಚನಾತ್ಮಕ ಹಾಗೂ ಶೈಕ್ಷಣಿಕ ಸಲಹೆ ಕೊಟ್ಟರು ಅದು ಗ್ರಾಂಟ್ – ಇನ್ – ಕೋಡ್ ನಿಯಮಕ್ಕೆ ಒಳಪಡುವುದಿಲ್ಲ ಎಂದು ಹೇಳಿ ಆ ಸಲಹೆಗಳನ್ನು ತಳ್ಳಿ ಹಾಕುವ ಮನೋವೃತ್ತಿ ಬೆಳೆಯಿತು. ಇಲಾಖೆ ಗೊತ್ತು ಪಡಿಸಿದ ಪರೀಕ್ಷೆಯಲ್ಲಿ ಒಳ್ಳೆಯ ಫಲಿತಾಂಶ ಬರುತ್ತಿಲ್ಲವೇ ಎಂಬುದನ್ನು ನೋಡಿ ಎಂದು ಹೇಳುವ ಉತ್ತರ ದೊರೆಯಲಾರಂಭಿಸಿತು. ಹೀಗಾಗಿ ಕಾಲೇಜಿನ ಬಗ್ಗೆ ಜನಪದ ಸೇವಾ ಟ್ರಸ್ಟ್ ಕಟ್ಟಿಕೊಂಡಿದ್ದ ಕನಸು ನುಚ್ಚು ನೂರಾಯಿತು. ಆದರೆ ಈ ಮೊದಲು ಈ ಕೆಳಗಿನಂತೆ ಸಿಬ್ಬಂದಿಯಿಂದ ಪತ್ರವೊಂದು ಬಂದಿತ್ತು. "ಜನಪದ ಸೇವಾ ಟ್ರಸ್ಟ್ ಕಳೆದ ಮೂರು ದಶಕಗಳಿಂದಲೂ ರಚನಾತ್ಮಕ ಕಾರ್ಯಗಳಲ್ಲಿ ತನ್ನನ್ನು ತೊಡಗಿಸಿಕೊಂಡು ದೇಶ ವಿದೇಶಗಳಲ್ಲಿ ಒಳ್ಳೆಯ ಹೆಸರು ಪಡೆದಿರುವುದನ್ನು ತಿಳಿದಿದ್ದೇನೆ. ಸರ್ವೋದಯ ಸಮಾಜ ರಚನೆಯ ಆದರ್ಶಕ್ಕಾಗಿ ಟ್ರಸ್ಟಿನ ಸದಸ್ಯರು ಅಹರ್ನಿಶಿ ಕಳೆದ ಮೂವತ್ತು ವರ್ಷಗಳಿಂದಲೂ ತ್ಯಾಗದ ಮನೋಭಾವನೆಯಿಂದ ಕೆಲಸ ಮಾಡಿಕೊಂಡು ಬರುತ್ತಿದುವುದನ್ನು ಕೂಡ ತಿಳಿದಿರುತ್ತೇನೆ. ಇಂಥ ಒಂದು ಒಳ್ಳೆಯ ಸಂಸ್ಥೆಯ ಚಟುವಟಿಕೆಗಳಲ್ಲಿ ಭಾಗವಹಿಸುವುದು ಒಂದು ಅದೃಷ್ಟವೆಂದು ಭಾವಿಸುತ್ತೇನೆ. ಈ ಕಾರಣಗಳಿಂದಾಗಿ ಕಳೆದ ಏಳು ವರ್ಷಗಳಿಂದ ಕಾಲೇಜಿನ ಜವಾಬ್ದಾರಿ ಸ್ಥಾನದಲ್ಲಿದ್ದು ಕೆಲಸ ಮಾಡಲು ಅವಕಾಶ ದೊರೆತದ್ದಕ್ಕಾಗಿ ನನಗೆ ಹೆಮ್ಮೆ ಅನಿಸುತ್ತದೆ. ಟ್ರಸ್ಟಿನ ಧ್ಯೆಯೋದ್ದೇಶಗಳನ್ನು ಕಾರ್ಯಗತಗೊಳಿಸಲು ನನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ಸಿದ್ಧನಿದ್ದೇನೆ. ಕಾಲೇಜು ಟ್ರಸ್ಟಿನ ಅವಿಭಾಜ್ಯ ಮತ್ತು ಮಹತ್ವದ ಅಂಗವಾಗಿದೆ. ಅದು ಟ್ರಸ್ಟಿನ ಕಾರ್ಯಚಟುವಟಿಕೆಯಲ್ಲಿ ಮತ್ತು ಅದರ ಬೆಳವಣಿಗೆಯಲ್ಲಿ ಮಹತ್ತರ ಪಾತ್ರವಹಿಸಬೇಕಾಗುತ್ತದೆ ಎಂಬುದನ್ನು ಅರಿತಿದ್ದೇನೆ

ಆದ್ದರಿಂದ ದಯಮಾಡಿ ನನ್ನನ್ನು ಕಾಲೇಜಿನ ಖಾಯಂಆಗಿ ಪ್ರಾಂಶುಪಾಲರ ಹುದ್ದೆಗೆ ಬಡ್ತಿ ನೀಡಿ ನನ್ನ ವೃತ್ತಿ ಜೀವನಕ್ಕೆ ಎಲ್ಲ ಪ್ರೋತ್ಸಾಹ ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಕಾಲೇಜಿನ ಹಾಗೂ ಟ್ರಸ್ಟಿನ ಅಭಿವೃದ್ಧಿಗಾಗಿ ನನ್ನನ್ನು ಸಮರ್ಥಿಸಿಕೊಳ್ಳುತ್ತೇನೆ. ನನ್ನ ಎಲ್ಲ ಸಹಕಾರವನ್ನು ಆಡಳಿತ ಮಂಡಳಿಗೆ ಕೊಡುತ್ತೇನೆ. ಯಾವಾಗಲೂ ಟ್ರಸ್ಟಿನ ಹಿತ ಕಾಪಾಡಿಕೊಂಡು ಬರುತ್ತೇನೆಂಬ ಭರವಸೆ ಕೊಡುತ್ತೇನೆ. " ಎಂದು ಟ್ರಸ್ಟಿನ ಕಾರ್ಯದರ್ಶಿಯವರಿಗೆ ಕಾಗದ ಬರೆದಿದ್ದ ಸಿಬ್ಬಂದಿ ತನ್ನ ಎಲ್ಲ ಆಶ್ವಾಸನೆಗಳಿಗೆ ವಿರೋಧವಾಗಿ ನಡೆದುಕೊಂಡದ್ದೂ ಮತ್ತು ಇದೆಲ್ಲಕ್ಕಿಂತ ಹೆಚ್ಚಾಗಿ ಹೆತ್ತ ತಾಯಿಯಂತೆ ಸಾಕಿ ಸಲುಹಿದ ಮತ್ತು ಯೋಗ್ಯ ಕನ್ನೆಯನ್ನು ಪರಿಚಯಿಸಿ ಮದುವೆ ಮಾಡಿದ ಟ್ರಸ್ಟಿನ ಕಾರ್ಯದರ್ಶಿಯವರ ಪತ್ನಿಯನ್ನು ರಕ್ಕಸಿ, ಪಿಶಾಚಿ ಎಂದು ಜರೆದು ನನ್ನ ನೋವು ಸಂಕಟ ಆಕೆಯನ್ನೂ ಬೆನ್ನಟ್ಟಲಿ ಎಂದು ಪ್ರಾರ್ಥಿಸುತ್ತೇನೆ. ನನ್ನ ವೇದನೆ ಆಕೆಯನ್ನೂ ಆವರಿಸಿ ಆಕೆ ನನ್ನ ತಂಟೆಗೆ ಬರದ ಹಾಗೆ ಏನಾದರೂ ದೊಡ್ಡ ರೋಗ ಬರಲಿ. ನನ್ನ ನೆಮ್ಮದಿ ಬದುಕಿಗೆ ವಿಷಕಾರುವ ಆಕೆಗೆ ಧಿಕ್ಕಾರ, ಧಿಕ್ಕಾರ, ಧಿಕ್ಕಾರ" ಎಂಬ ಪತ್ರ ಬಂದದ್ದೂ ಹೆಚ್ಚು ಆಘಾತವನ್ನು ಉಂಟುಮಾಡಿತು. ಆ ಪತ್ರವನ್ನು ಕನಸಿನಲ್ಲಿ ಓದುತ್ತಿದ್ದಂತೆಯೇ ಮೈ ಬೆವರಿತು. ಗಾಬರಿಯಿಂದ ಕಣ್ಣು ತೆರೆದೆ. ಬೆಳಗಿನ ಜಾವ ಆರುಗಂಟೆಯ ಸಮಯವಾಗಿತ್ತು. ಹೊರಗಡೆ ಹಿತ್ತಲಲ್ಲಿ ಉಷಃ ಕಾಲದ ಮಂದ ಪ್ರಕಾಶದಲ್ಲಿ ಬೆಟ್ಟದ ಮೇಲಿನ ಶ್ರೀಯೋಗನರಸಿಂಹ ಸ್ವಾಮಿ ಗೋಪುರ ಮತ್ತು ತೆಂಗಿನ ಮರ ಮತ್ತು ಬೇಲದಮರ ಬಹು ಚೇತೋಹಾರಿಯಾಗಿ ಗೋಚರಿಸಿದವು. ಮನುಷ್ಯನ ಕೃತಘ್ನತಾ ಮನೋಭಾವ ನೆನೆದು ನಸುನಗುತ್ತಾ ನನ್ನ ಕಾರ್ಯದಲ್ಲಿ ತೊಡಗಿದೆ. ಈ ರೀತಿ ಕಾಲೇಜಿನ ಬಗೆಗಿನ ಕನಸು ತಿರುಕನೋರ್ವನ ಕನಸಾಯಿತು.

ಸನ್ಮಾನ್ಯರಿಂದ,

ಪ್ರಬುದ್ಧಾಲಯ
೧೭-೦೪-೨೦೧೪

ನೀವು ಕ್ರಮವಾಗಿ ಕಳುಹಿಸುತ್ತಿರುವ "ಜನಪದ ವಿಚಾರ", ಪ್ರತಿ ತಿಂಗಳಲ್ಲೂ ಕ್ರಮವಾಗಿ ತಲುಪುತ್ತಿದ್ದರೂ, ಓದಿ, ಹಳೆ ನೆನಪುಗಳನ್ನು ಸವಿಯುತ್ತಿರುತ್ತೇನೆ.

ಈ ೫ ವರ್ಷಗಳ ಕಾಲದಿಂದ ಸೊಗಸಾದ ಜಾಗದಲ್ಲಿ ವಾಸಮಾಡುವ ಭಾಗ್ಯ ನನ್ನದಾಗಿದೆ.

ನಿಮ್ಮ ಮಾಸಪತ್ರಿಕೆಯನ್ನೂ ತಪ್ಪದೆ ೨-೩ ಬಾರಿ ಓದಿ ನಮ್ಮ ದೇಶದ ಪವಿತ್ರ ಭಾರತಾಂಬೆಯ ದುಸ್ಥಿತಿಗಾಗಿ ಅತ್ಯಂತ ದುಃಖವೂ ಪಡುತ್ತಿದ್ದೇನೆ.

ಮೊದಲಿಗೆ "ಜನಪದ ಅಂತರಂಗದಲ್ಲಿ" ಓದಿ ಬಿಡುತ್ತೇನೆ. ಈ ತಿಂಗಳ ಸಂಚಿಕೆ ನೋಡಿದಾಗ ಮನಸ್ಸಿಗೆ ತುಂಬಾ ನೋವಾಗಿದೆ. ಈ ಕೂಡಲೇ ನನ್ನ ಕೈಲಾದಷ್ಟು ಹಣವನ್ನು ಎಂ.ಓ ಮಾಡುತ್ತಿದ್ದೇನೆ. ನಿಮ್ಮ ಸಂಸಾರದ ಖರ್ಚಿಗೆ ಹಾಗೂ ನನ್ನ ಆತ್ಮೀಯರಾದ ಹಾಗೂ ಅಳಿಯಂದಿರಾದ ಶ್ರೀ.ಶಿವಶಂಕರಯ್ಯ ನವರಿಗೂ ಬರೆದಿದ್ದೇನೆ. ಆತನೂ ಆತನ ಶ್ರೀಮತಿಯೂ ಇಬ್ಬರೂ ಬಹಳ ಧಾರಾಳಿಗಳು. ಆತ Retired Chief Engineer. ಈ ಪತ್ರ ತಲುಪಿದ ನಂತರ ಅವರೂ ಕೈಲಾದಷ್ಟು ೧,೦೦೦/- ಕ್ಕೆ ಕಡಿಮೆ ಇಲ್ಲದಂತೆ ಕಳುಹಿಸಿಕೊಡುವರೆಂಬ ನಂಬಿಕೆ ನನಗಿದೆ.

ನನ್ನ ಕಾಗದ ಅವರಿಗೆ ತಲುಪಿದ ನಂತರ, ಅವರಿಗೂ ವಯಸ್ಸಾಗಿಧೆ. ಮೊಳಕಾಲಿನ ಔಪರೇಷನ್ ಆಗಲೇ ಬೇಕಾದಂತಹ ಪರಿಸ್ಥಿತಿಯಲ್ಲಿದ್ದಾರೆ. ಈ ಸಣ್ಣ ಸಹಾಯವನ್ನು ಖಂಡಿತ ಮಾಡಿಯೇ ತೀರುವರೆಂಬ ಸಂಪೂರ್ಣ ನಂಬಿಕೆಯಿಂದ ನಾನು ನಿಮಗೆ ಬರೆಯುತ್ತಿದ್ದೇನೆ.

ನಿಮ್ಮ ಶ್ರೀಮತಿ ಗಿರಿಜಮ್ಮ ನವರ ತ್ಯಾಗ ಜೀವನ, ನಿಮ್ಮ ಇಡೀ ಕುಟುಂಬದವರ ಸೇವಾ ಮನೋಭಾವ ಅತ್ಯಂತ ಶ್ಲಾಘನೀಯ. ಪರಮಾತ್ಮನ ಆಶೀರ್ವಾದ, ಕೃಪಾಕಟಾಕ್ಷ, ನಿಮ್ಮ ಕುಟುಂಬದ ಸದಸ್ಯರೆಲ್ಲರ ಮೇಲೆ ವರ್ಷಿಸಲಿ ಎಂದು ಪ್ರಾರ್ಥಿಸುವ ನಿಮ್ಮ ಆತ್ಮೀಯ ಸೋದರಿ

– ಕಮಲಮ್ಮ ಗುರು
ಬೆಂಗಳೂರು

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾ ಸ್ಮರಿಸುತ್ತದೆ.

ಶ್ರೀ.ಹೆಚ್.ಎಮ್. ಶಿವಣ್ಣ	---	ಹಾಸನ
ಶ್ರೀ. ಎಮ್.ಜಿ.ರವಿಕುಮಾರ್	---	ಕೆ.ಆರ್.ಪೇಟೆ
ಶ್ರೀ.ಡಾ// ದೇವೇಂದ್ರಬಾಬು	---	ಬೆಂಗಳೂರು
ಶ್ರೀ.ಆನಂದರಾವ್ ಬಾಟ್ನಿ ,		
ಶ್ರೀಮತಿ ಭಾರತಿ ದೇಸಾಯಿ,		
ಶ್ರೀ.ಹೆಚ್.ಎಮ್ ನಾಗರಾಜು,		
ಶ್ರೀ ಕೆ.ಜಿ.ಪ್ರಕಾಶ್, ಶ್ರೀ.ಕೆ.ರಾಮಚಂದ	---	ಮೈಸೂರು
ಶ್ರೀ.ಹೆಚ್.ಎನ್.ಜಯದೇವೇಗೌಡ	---	ಹಾಸನ
ಶ್ರೀ.ಎಲ್.ನರಸಿಂಹಯ್ಯ	---	ತುಮಕೂರು

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ

ಶ್ರೀ.ಹೆಚ್.ಜೆ.ಪದ್ಮರಾಜು	---	ತೋವಿನಕೆರೆ
ಗ್ರಾಮಪಂಚಾಯಿತಿ ಗ್ರಂಥಾಲಯ	---	ತಗಡೂರು
ಶ್ರೀಕಂಠಸ್ವಾಮಿ, ರತ್ನ ಪಡಕಿ,		
ಎ.ವೇಣುಗೋಪಾಲ್, ನಾಗರಾಜ ನ್ಯಾಮತಿ,		
ಎಮ್.ಎಸ್.ವೆಂಕಟರಾವ್, ವಿಜಯಲಕ್ಷ್ಮಿ	---	ಬೆಂಗಳೂರು
ಶ್ರೀ.ಕೆ.ಎಮ್.ಮಹೇಶ್	---	ಮಂಡ್ಯ
ಶ್ರೀ.ಕೆ.ರಾಮೇಗೌಡ	---	ಸಂಗಾಪುರ
ಶ್ರೀ.ರಘುರಾಮ್, ಶ್ರೀ.ಕೆ.ಸುಂದರರಾಜು	---	ಬೆಂಗಳೂರು
ಎಸ್.ಮೀನಾ, ಶ್ರೀಮತಿ ಸುಮನಾ ವಿಶ್ವನಾಥ್,		
ಶ್ರೀ ಖಾದ್ರಿ ಪಾರ್ಥಸಾರಥಿ	----	ಮೈಸೂರು

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು.

ತೆರೆದ ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820

ಶ್ರೀಮತಿ/ ಶ್ರೀ...

....

....

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust
Melkote, Dist- Mandya - 571431. Phone : 08236 316344/ 299854
e-mail : janapada@yahoo.com - Web : janapada.net
Printed at Sanketh Mudrna, Melkote